ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್ ಪಂದ್ಯ ಮುಗಿದ ತಕ್ಷಣ ಅರ್ಜೆಂಟೀನಾ ತಂಡದ ಆಟಗಾರರು ಕ್ರೀಡಾಂಗಣದಲ್ಲಿ ತೋರಿದ ವರ್ತನೆಯ ಬಗ್ಗೆ ಸ್ಪೇನ್ ತಂಡದ ಕೋಚ್ ಲೂಯಿಸ್ ದಿಲಾ ಫುಯಂತೆ ಟೀಕಿಸಿದ್ದಾರೆ.

25 ಜುಲೈ, 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 134 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಶಿಕ್ಷೆ ನೀಡುವ ಮುಂಚೆ ಶಿಕ್ಷಕರಿಗಿರಲಿ ವಿವೇಚನೆ » 2

ವಿದ್ಯೆಯಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ » 3

ಪೂರ್ವಾನುಮತಿ ಇಲ್ಲದೆ ವಿಡಿಯೋ ಬಹಿರಂಗಕ್ಕೆ ನಿಷೇಧ» 4

ಪ್ರಧಾನ್ ರಾಜೀನಾಮೆಗೆ ಸಮಯ ಕೇಳಿದ ಕೇಂದ್ರ

ಪ್ರತಿಭಟನಾಕಾರರೊಂದಿಗೆ ಸಚಿವರ ಸಭೆ | ಸೋನಂ ವಾಂಗ್ಚುಕ್ ಉಪವಾಸ ಅಂತ್ಯ

• ಪ್ರಜೋದಯ ವರದಿ

ನವದೆಹಲಿ: ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ನಡೆಯುತ್ತಿರುವ ಪ್ರತಿಭಟನೆ ಸಂಬಂಧ ಕೇಂದ್ರ ಸಚಿವರು ಮತ್ತು ಪ್ರತಿಭಟನಾಕಾರರ ನಡುವೆ ನಡೆದ ಸಭೆಯ ಬಳಿಕ, ಸಿಜೆಪಿ ಪ್ರಮುಖ ಬೇಡಿಕೆ ಕುರಿತು ತೀರ್ಮಾನ ಕೈಗೊಳ್ಳಲು ಕೇಂದ್ರ ಸರ್ಕಾರವು ಶನಿವಾರ ಮಧ್ಯಾಹ್ನದವರೆಗೆ ಕಾಲಾವಕಾಶ ಕೋರಿದೆ.

ಶುಕ್ರವಾರ ಕಾನ್‌ಸ್ಟಿಟ್ಯೂಷನ್ ಕ್ಲಬ್ ಆಫ್ ಇಂಡಿಯಾದಲ್ಲಿ ನಡೆದ ಸಭೆಯಲ್ಲಿ ಸರ್ಕಾರದ ಪರವಾಗಿ ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಮತ್ತು ಸಚಿವ ಜಿತೇಂದ್ರ ಸಿಂಗ್ ಭಾಗವಹಿಸಿದ್ದರೆ, ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಪರವಾಗಿ ರಾಷ್ಟ್ರೀಯ ವಕ್ತಾರರಾದ ಸೌರವ್ ದಾಸ್, ಅಶುತೋಷ್ ರಾಂಕಾ ಭಾಗವಹಿಸಿದ್ದರು.

ಸಭೆಯ ಬಳಿಕ ಮಾತನಾಡಿದ ಸಚಿವ ಜೆ.ಪಿ.ನಡ್ಡಾ ಅವರು, 3 ಪ್ರಮುಖ ಬೇಡಿಕೆಗಳು ಮತ್ತು

ಪರೀಕ್ಷಾ ಸುಧಾರಣೆಗಾಗಿ 5 ಸಲಹೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಶನಿವಾರ ಮಧ್ಯಾಹ್ನ ಮತ್ತೆ ಭೇಟಿಯಾಗಲಿದ್ದು, ಸರ್ಕಾರದ ಮಟ್ಟದಲ್ಲಿ ನಡೆಸಿದ ಚರ್ಚೆಯ ವಿವರಗಳನ್ನು ಅವರಿಗೆ ತಿಳಿಸಲಿದ್ದೇವೆಂದರು.

ಸಿಜೆಪಿ ನಾಯಕ ಅಶುತೋಷ್ ರಾಂಕಾ ಮಾತನಾಡಿ, ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆ ಪಡೆಯುತ್ತದೆಂಬ ವಿಶ್ವಾಸವಿದ್ದು, ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಕುಟುಂಬಗಳಿಗೆ ಪರಿಹಾರ ಒದಗಿಸುವುದು ಮತ್ತು ವಿದ್ಯಾರ್ಥಿಗಳ ಮೇಲಿನ ಎಫ್‌ಐಆರ್, ಕಾನೂನು ಪ್ರಕರಣಗಳನ್ನು ಹಿಂಪಡೆಯುವ ಎರಡು ಬೇಡಿಕೆಗಳಿಗೆ ಸರ್ಕಾರ ಈಗಾಗಲೇ ಒಪ್ಪಿಗೆ ಸೂಚಿಸಿದೆ ಎಂದರು. ಸಿಜೆಪಿ ಮುಖ್ಯ ವಕ್ತಾರ ಸೌರವ್ ದಾಸ್ ಮಾತನಾಡಿ, ನಿಯೋಗವು ತಮ್ಮ ಎಲ್ಲಾ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದು, ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಯೇ ಮುಖ್ಯ ಬೇಡಿಕೆಯಾಗಿದೆ ಎಂದು ತಿಳಿಸಿದರು.

ಕಠಿಣ ಶಿಕ್ಷೆ ವಿಧಿಸುವ ಕರಡು ಮಸೂದೆ

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣ ಸಂಬಂಧ ಕೇಂದ್ರ ಸಚಿವ ಸಂಪುಟವು ಕಠಿಣ ಶಿಕ್ಷೆ ವಿಧಿಸುವ ಕರಡು ಮಸೂದೆಗೆ ಶುಕ್ರವಾರ ಅನುಮೋದನೆ ನೀಡಿದೆ. ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಭಾಗಿಯಾಗಿರುವವರಿಗೆ ಈಗ ಚಾಲ್ತಿಯಲ್ಲಿರುವ ಕಾನೂನುಗಳಿಗಿಂತಲೂ ಕಠಿಣ ಶಿಕ್ಷೆ ವಿಧಿಸುವ ಕರಡು ಮಸೂದೆಯನ್ನು ಅನುಮೋದಿಸಲಾಗಿದೆ.

ಸೋನಂ ವಾಂಗ್ಚುಕ್ ಉಪವಾಸ ಅಂತ್ಯ

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಲಾಗುವುದು ಹಾಗು ದೇಶದ ಪರೀಕ್ಷಾ ವ್ಯವಸ್ಥೆಯಲ್ಲಿನ ಅಕ್ರಮಗಳ ಕುರಿತು ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಚರ್ಚೆ ನಡೆಸಲಾಗುವುದೆಂದು ಕೇಂದ್ರ ಸರ್ಕಾರ ಲಿಖಿತ ಭರವಸೆ ನೀಡಿದ ಹಿನ್ನೆಲೆಯಲ್ಲಿ ಹೋರಾಟಗಾರ ಸೋನಂ ವಾಂಗ್ಚುಕ್ ಅವರು ತಮ್ಮ 26 ದಿನಗಳ ಉಪವಾಸ ಸತ್ಯಾಗ್ರಹವನ್ನು ಅಂತ್ಯಗೊಳಿಸಿದ್ದಾರೆ.

5ನೇ ದಿನವೂ ಕಲಾಪ ಮುಂದೂಡಿಕೆ

ಪ್ರಶ್ನೆಪತ್ರಿಕೆ ಸೋರಿಕೆ ವಿವಾದಕ್ಕೆ ಸಂಬಂಧಿಸಿದಂತೆ ಪ್ರತಿಪಕ್ಷಗಳ ಪ್ರತಿಭಟನೆ ಶುಕ್ರವಾರವೂ ಮುಂದುವರಿದಿದ್ದು, ಸಂಸತ್ ಮುಂಗಾರು ಅಧಿವೇಶನದ 5ನೇ ದಿನವೂ ಕಲಾಪ ನಡೆಯದೆ ಲೋಕಸಭೆಯನ್ನು ಸೋಮವಾರದವರೆಗೆ ಮುಂದೂಡ ಲಾಗಿದೆ. ಸೋಮವಾರದಿಂದ ಆರಂಭವಾದ ಮುಂಗಾರು ಅಧಿ ವೇಶನದ ಐದು ದಿನಗಳಲ್ಲೂ ಪ್ರತಿ ಪಕ್ಷಗಳ ಪ್ರತಿಭಟನೆ ಮತ್ತು ಘೋಷ ಣೆಗಳಿಂದಾಗಿ ಸಂಸತ್ ನ ಎರಡೂ ಸದನಗಳಲ್ಲಿ ವಿಚಾರಗಳು ಚರ್ಚೆಗೆ ಬರಲಿಲ್ಲ.

ಚನ್ನಮ್ಮ ತ್ಯಾಗಮಯಿ, ನನ್ನ ಬಾಳಿನ ಚೈತನ್ಯಶಕ್ತಿ

• ಪ್ರಜೋದಯ ವರದಿ

ಹಾಸನ: ನನ್ನೊಂದಿಗೆ ಸುದೀರ್ಘ 72 ವರ್ಷಗಳ ಕಾಲ ಹೆಜ್ಜೆಗೆ ಹೆಜ್ಜೆ ಇರಿಸಿ ನಡೆದಿದ್ದ ನನ್ನ ಶ್ರೀಮತಿ ಚನ್ನಮ್ಮ ಅವರು ಶಿವೈಕ್ಯರಾದ ಕಷ್ಟಕರ ಸಂದರ್ಭದಲ್ಲಿನಮ್ಮ ದುಃಖದಲ್ಲಿಭಾಗಿಯಾಗಿ ಸಾಂತ್ವನದ ಚೈತನ್ಯದಾರೆ ಎರೆದ ಸಮಸ್ತರಿಗೂ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಕೃತಜ್ಞತೆ ಸಮರ್ಪಿಸಿದ್ದಾರೆ.

ನಾವಿಬ್ಬರು ಹಿರಿಯರ ಆಣತಿಯಂತೆ ಪತಿ-ಪತ್ನಿಯರಾಗಿ ಸಪ್ತಪದಿ ತುಳಿದು ಬಾಳಬಂಡಿ ಏರಿ, ಸುಖ-ದುಃಖದಲ್ಲಿ ಸಮಭಾಗಿಗಳಾಗಿ ಸಪ್ತ ದಶಕಗಳ ಕಾಲ ಜೀವನ್ಮುಖಿಗಳಾಗಿ ತುಂಬು ಜೀವನ ನಡೆಸಿದ್ದೇವೆ. ನಾನು ಶಾಸಕನಾಗಿ, ಪ್ರತಿಪಕ್ಷ ನಾಯಕನಾಗಿ, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ಕೊನೆಗೆ ಪ್ರಧಾನ ಮಂತ್ರಿಯಾಗಿ ರಾಷ್ಟ್ರಸೇವೆ ಮಾಡುವ ಮಹಾಭಾಗ್ಯ ಸಿಕ್ಕಿತು. ಕೀರ್ತಿ ಪ್ರಖ್ಯಾತಿ ಎಲ್ಲವೂ ನನಗಷ್ಟೇ ಸೇರಿತು. ಆದರ ಹಿಂದಿನ ಚೈತನ್ಯಶಕ್ತಿ ಚನ್ನಮ್ಮ ಅವರೇ ಆಗಿದ್ದರೆಂದರೆ ಉತ್ಪ್ರೇಕ್ಷೆ ಅಲ್ಲ. ಗಂಧದ ಕೊರಡು ತನ್ನನ್ನು ತಾನು ತೇಯ್ದುಕೊಂಡು ಪರಿಮಳ ಹೊರ ಸೂಸುವಂತೆ ಚನ್ನಮ್ಮ ಅವರ ಎಣೆಯಿಲ್ಲದ ಮಮತೆ ಮತ್ತು ತ್ಯಾಗಶೀಲತೆ ನನ್ನ ಬಾಳಿಗೆ ಪರಿಪೂರ್ಣತೆ ತುಂಬಿತು ಎಂದು ಗುಣಗಾನ ಮಾಡಿದ್ದಾರೆ.

» 4ನೇ ಪುಟದಲ್ಲಿ

ಭಾವುಕ ಪತ್ರ ಬರೆದು ಕೃತಜ್ಞತೆ ಸಮರ್ಪಿಸಿದ ಹೆಚ್.ಡಿ.ದೇವೇಗೌಡ

ಸಾತ್ವಿಕ ಜೀವಿ ನನ್ನ ಧರ್ಮಪತ್ನಿ

ಮಾಜಿ ಪ್ರಧಾನಿಯ ಮಡದಿಯಾಗಿದ್ದರೂ ಬದುಕಿನ ಕಟ್ಟಕಡೆಯ ಕ್ಷಣದವರೆಗೂ ಸಾಮಾನ್ಯ ನಾರಿಯಾಗಿ ಬದುಕಿದ ಸಾತ್ವಿಕ ಜೀವಿ ನನ್ನ ಧರ್ಮಪತ್ನಿ. ತಮ್ಮ ವ್ಯಕ್ತಿತ್ವ ಕರುಣೆ, ವಾತ್ಸಲ್ಯಕ್ಕೆ ರಾಜಕೀಯದ ಸೋಂಕು ಸೋಂಕದಂತೆ ಎಚ್ಚರ ವಹಿಸಿದ್ದ ಅವರು, ಮನುಷ್ಯ ಸಂಬಂಧಗಳಿಗೆ ಅತೀ ಹೆಚ್ಚು ಮಹತ್ವ ನೀಡುತ್ತಿದ್ದರೆಂದು ದೇವೇಗೌಡರು ಸ್ಮರಿಸಿದ್ದಾರೆ.

ಕಾಡಾನೆಗಳ ಸ್ಥಳಾಂತರಿಸದಿದ್ದರೆ ಚುನಾವಣೆ ಬಹಿಷ್ಕಾರ

ಕೋಗೋಡು-ಬೇಕನಹಳ್ಳಿ ಗ್ರಾಮಸ್ಥರ ಎಚ್ಚರಿಕೆ | ರಸ್ತೆ ತಡೆದು ಪ್ರತಿಭಟನೆ

• ಪ್ರಜೋದಯ ವರದಿ

ಬೇಲೂರು: ಮಲೆನಾಡು ಭಾಗದಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳನ್ನು ಶಾಶ್ವತವಾಗಿ ಸ್ಥಳಾಂತರಿಸಿ ನೆಮ್ಮದಿಯ ಜೀವನಕ್ಕೆ ಅನುಕೂಲ ಮಾಡಿಕೊಡ ಬೇಕು. ಇಲ್ಲವಾದರೆ ಮುಂಬರುವ ಚುನಾವಣೆ ಬಹಿಷ್ಕರಿಸಬೇಕಾಗುತ್ತದೆ ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ಸಮಸ್ಯೆಗೆ ಪರಿಹಾರ ಕಲ್ಪಿಸ ಬೇಕೆಂದು ಒತ್ತಾಯಿಸಿ ಶುಕ್ರವಾರ ಕಾಫಿ ಬೆಳೆಗಾರರು ಹಾಗು ಸ್ಥಳೀಯರು ಕೋಗೋಡು-ಬೇಕನಹಳ್ಳಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಕಾಫಿ ಬೆಳೆಗಾರರ ಸಂಘದ ಜಿಲ್ಲಾ ನಿರ್ದೇಶಕ ಕೋಗೋಡು ಸಂತೋಷ್ ಅವರು ಮಾತನಾಡಿ, ಆರೇಹಳ್ಳಿ ಹೋಬಳಿ ಭಾಗದಲ್ಲಿ 100ಕ್ಕೂ ಹೆಚ್ಚು ಕಾಡಾನೆಗಳಿದ್ದು, ನೂರಾರು ಎಕರೆ ಬೆಳೆ ನಾಶವಾಗಿ ಜನರು ಬಲಿಯಾಗಿದ್ದಾರೆ. ರೈತರು ತೋಟಕ್ಕೆ ಹೋಗಿ ವಾಪಾಸ್ ಮನೆಗೆ ಬರುತ್ತಾರೆನ್ನುವ ನಂಬಿಕೆ ಇಲ್ಲದಂತಾಗಿದೆ. ಹಗಲು-ರಾತ್ರಿ ಎನ್ನದೆ ಕಾಡಾನೆಗಳು ಎಲ್ಲೆಂದ

ರಲ್ಲಿ ಓಡಾಡುತ್ತಿವೆ. ಕಾಡಾನೆಗಳ ಸಮಸ್ಯೆಗೆ ಸರ್ಕಾರ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಆಗ್ರಹಿಸಿದರು.

ಟೌನ್‌ಶಿಪ್ ಯೋಜನೆಗಾಗಿ ಬಿಡದಿಯಲ್ಲಿ ರೈತರಿಗೆ ಹೇಗೆ ಎಕರೆಗೆ 2 ರಿಂದ 3 ಕೋ.ರೂ. ಪರಿಹಾರ ಘೋಷಿಸಲಾಗಿದೆಯೋ ಅದೇ ರೀತಿ ನಮಗೂ ಎಕರೆಗೆ 1 ಕೋ.ರೂ. ನೀಡಿದರೆ ಸ್ಥಳಾಂತರವಾಗುತ್ತೇವೆ. ಸರ್ಕಾರ ತುರ್ತಾಗಿ ಆನೆಗಳ ಆಥವಾ ಮನುಷ್ಯರ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಬೇಕು. ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿದರೆ ರಾಷ್ಟ್ರೀಯ ಹೆದ್ದಾರಿ ತಡೆದು ಉಪವಾಸ ಸತ್ಯಾಗ್ರಹ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕಾಫಿ ಬೆಳೆಗಾರರ ಸಂಘದ ತಾಲ್ಲೂಕು ಕಾರ್ಯದರ್ಶಿ ಗೆಂಡೇಹಳ್ಳಿ ಲೋಕೇಶ್ ಅವರು ಮಾತನಾಡಿ, 30 ವರ್ಷದಿಂದ ಬೆಳೆಸಿದ ಗಿಡಗಳನ್ನೆಲ್ಲಾ ಆನೆಗಳು ಕಿತ್ತು ಹಾಕಿವೆ. ಮತ್ತೆ ಹಲುಸಾದ ಬೆಳೆ ಕಾಣಬೇಕೆಂದರೆ 30 ವರ್ಷ ಶ್ರಮಪಡಬೇಕು. ಆನೆಗಳ ಸ್ಥಳಾಂತರ ಪ್ರಕ್ರಿಯೆ ಕಾಟಾಚಾರಕ್ಕೆ ನಡೆಯುತ್ತಿದೆ. ಸರ್ಕಾರ ಕೋಟ್ಯಾಂತರ ರೂ. ಖರ್ಚು ಮಾಡುತ್ತಿದ್ದರೂ ಪ್ರಯೋಜನವಾಗುತ್ತಿಲ್ಲ. ಅರಣ್ಯದಲ್ಲಿ ಆನೆಗಳಿಗೆ ಬೇಕಾದ ಆಹಾರದ ಕೊರತೆ ಹೊರತು ಮತ್ತೆ ಗಮನ ಹರಿಸುವುದಿಲ್ಲ. ವಾರದೊಳಗೆ ಸಮಸ್ಯೆಗೆ ಕ್ರಮಕೈಗೊಳ್ಳದಿದ್ದಲ್ಲಿ ರಾಷ್ಟ್ರೀಯ ಹೆದ್ದಾರಿ ರಸ್ತೆ ತಡೆಯ ಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹರೀಶ್ ನಾಗೇನಹಳ್ಳಿ ಅವರು ಮಾತನಾಡಿ, ಕಳೆದ ನಾಲ್ಕು ವರ್ಷಗಳಿಂದ ಚೀಕನಹಳ್ಳಿ-ಹುಣುಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಡಾನೆಗಳ ಉಪಟಳ ಮಿತಿ ಮೀರಿದೆ. ಸರ್ಕಾರಕ್ಕೆ ಕಾಡಾನೆಗಳನ್ನು ಶಾಶ್ವತವಾಗಿ ಓಡಿಸಲು ಕ್ರಮ ಕೈಗೊಳ್ಳ ಬೇಕು. ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದೆಂದರು.

ಕಾಫಿ ಬೆಳೆಗಾರರ ಸಂಘದ ಹೋಬಳಿ ಅಧ್ಯಕ್ಷ ಅನಂತರಾಜು, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹರೀಶ್, ಬೆಳೆಗಾರರಾದ ರಮೇಶ್ ಸುವರ್ಣ, ನವೀನ್, ಸುನೀಲ್, ವಿಶ್ವನಾಥ್, ಗೋಪಿ ಮೊದಲಾದವರಿದ್ದರು.

ದೇವೇಗೌಡರಿಗೆ ಸಾಂತ್ವನ ಹೇಳಿದ ರಾಜ್ಯಪಾಲರು

• ಪ್ರಜೋದಯ ವರದಿ

ಬೆಂಗಳೂರು: ಚನ್ನಮ್ಮ ಅವರ ನಿಧನ ಹಿನ್ನೆಲೆಯಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಶುಕ್ರವಾರ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ನಿವಾಸಕ್ಕೆ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳುವ ಜೊತೆಗೆ ದೇವೇಗೌಡ ಅವರಿಗೆ ಆತ್ಮಸ್ಥೈರ್ಯ ತುಂಬಿದರು.

ಬೆಂಗಳೂರಿನ ಪದ್ಮನಾಭನಗರದಲ್ಲಿರುವ ನಿವಾಸಕ್ಕೆ ಆಗಮಿಸಿದ ರಾಜ್ಯಪಾಲರು, ಶ್ರೀಮತಿ ಚನ್ನಮ್ಮ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಈ ವೇಳೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಸೇರಿ ಕುಟುಂಬ ಸದಸ್ಯರು ಉಪಸ್ಥಿತರಿದ್ದರು. ಇದೇ ವೇಳೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಭೇಟಿ ನೀಡಿ ಸಾಂತ್ವನ ಹೇಳಿದ್ದಾರೆ.

ಉದ್ಯೋಗಿ ಮಾತ್ರವಲ್ಲ, ಉದ್ಯಮಿಯಾಗಿ ಬದುಕು ಕಟ್ಟಿಕೊಳ್ಳಿ

• ಪ್ರಜೋದಯ ವರದಿ

ಹಾಸನ: ಪ್ರಸ್ತುತ ದಿನಗಳಲ್ಲಿ ಸ್ವ-ಉದ್ಯೋಗದ ಮೂಲಕ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಾಕಷ್ಟು ಅವಕಾಶಗಳಿದ್ದು, ಜಿಲ್ಲೆಯ ಮಹಿಳೆಯರು ಉದ್ಯೋಗಿಗಳಷ್ಟೇ ಅಲ್ಲದೆ ಉದ್ಯಮಿಯಾಗಿ ಬೆಳೆಯಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಸಲಹೆ ನೀಡಿದರು.

ಭಾರತೀಯ ರಫ್ತು ಸಂಸ್ಥೆಗಳ ಒಕ್ಕೂಟ, ರಫ್ತು ಪ್ರಚಾರ ಮಿಷನ್ (ಇಪಿಎಂ), ಟ್ರೇಡ್ ಕನೆಕ್ಟ್ ಇ-ಪ್ಲಾಟ್‌ಫಾರ್ಮ್, ಜಿಲ್ಲಾ ರಫ್ತು ಕೇಂದ್ರಗಳು, ಎಫ್‌ಟಿಎ ಔಟ್‌ರೀಚ್ ಪ್ರೋಗ್ರಾಂ (ಯುಕೆ, ಇಯು, ಓಮನ್, ಆಸ್ಟ್ರೇಲಿಯಾ ಮತ್ತು ಯುಎಇ) ನಿರ್ಯಾತ್ ಬಂಧು ಯೋಜನೆಯಡಿ ನಗರದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಶುಕ್ರವಾರ ನಡೆದ ರಫ್ತು

ಪ್ರಚಾರ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಆಧುನಿಕ ಯುಗದಲ್ಲಿ ಸ್ವ-ಉದ್ಯೋಗ ಮಾಡಲು ಸಾವಿರಾರು ಅವಕಾಶಗಳಿವೆ. ಕೃಷಿ ಆಧಾರಿತ, ಹೈನುಗಾರಿಕೆ ಹಾಗು ಯಾವುದೇ ಸಣ್ಣ, ದೊಡ್ಡ ಉದ್ಯೋಗ ಆರಂಭಿಸಲು ಆಯೆÉ್ಕಗಳಿವೆ ಎಂದರು.

ಇಂದಿನ ದಿನಗಳಲ್ಲಿ ಸ್ನಾತಕೋತ್ತರ ಪದವಿ ಪಡೆದ ಶೇ.2ರಷ್ಟು ಜನರು ಮಾತ್ರ ಸರ್ಕಾರಿ ಹುದ್ದೆ ಪಡೆಯುತ್ತಿದ್ದಾರೆ. ಯುವಕ-ಯುವತಿಯರು ತಮ್ಮದೇಯಾದ ಸ್ವಂತ ಉದ್ಯೋಗ ಪ್ರಾರಂಭಿಸಬೇಕು. ಜಿಲ್ಲೆಯಲ್ಲಿ 10,900 ಕೈಗಾರಿಕಾ ಸಂಸ್ಥೆಗಳಿದ್ದು, 1,10,000 ಜನರಿಗೆ ಉದ್ಯೋಗ ನೀಡಿದ್ದಾರೆ. ಉದ್ಯಮಿದಾರರು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸುತ್ತಿದ್ದಾರೆ. ಜಿಲ್ಲೆಯಲ್ಲಿ 54 ಸಾವಿರ ಕೋ.ರೂ. ಸರಕು ವಿದೇಶಗಳಿಗೆ ರಫ್ತಾಗುತ್ತಿದ್ದು, ಇನ್ನುಷ್ಟು ಸರಕು ರಫ್ತು ಆಗಬೇಕೆಂದು ತಿಳಿಸಿದರು.

ಸಣ್ಣ ಮತ್ತು ದೊಡ್ಡ ಉದ್ಯಮಗಳು ಅಂತರ್ರಾಷ್ಟ್ರೀಯ ಮಟ್ಟಕ್ಕೆ ಬೆಳೆ ಯುವುದಕ್ಕೆ ಈ ಕಾರ್ಯಾಗಾರ ಸುವರ್ಣ ಅವಕಾಶವಾಗಿದ್ದು, ಪ್ರಯೋಜನ ವನ್ನು ಎಲ್ಲರೂ ಪಡೆಯ ಬೇಕು. ಹೊಸದಾಗಿ ಉದ್ಯೋಗ ಸ್ಥಾಪನೆ ಮಾಡುವ ಅಭ್ಯರ್ಥಿಗಳಿಗೆ, ರೈತರು ಹಾಗು ಹಳೆಯ ಉದ್ಯಮಿದಾರರ ಯಾವುದೇ ಸಮಸ್ಯೆಗಳು ಇದ್ದರೆ ಕಾರ್ಯಾಗಾರದಲ್ಲಿ ಪರಿಹಾರ ಕಂಡು ಕೊಳ್ಳಬಹುದಾಗಿದೆ ಎಂದರು.

ಜಿಲ್ಲೆಯ ಸಕಲೇಶಪುರ ತಾಲ್ಲೂಕಿ ನಲ್ಲಿ ವಿಶೇಷವಾದ ಕಾಫಿ ಬೀಜ ಹಾಗು ಸಾಂಬಾರ್ ಪದಾರ್ಥಗಳು ಅಂತ ರ್ರಾಷ್ಟ್ರೀಯ ಮಟ್ಟದಲ್ಲಿ ರಫ್ತು ಆಗು ತ್ತಿದ್ದು, ರೈತರು ಹಾಗು ರೈತ ಮಹಿಳೆಯರು ಸಣ್ಣ ಉದ್ಯಮ ಆರಂಭಿಸಿದ್ದಾರೆ. ಮುಂದೆ ಆರ್ಥಿಕ ವಾಗಿ ಸಬಲೀಕರಣ ಸಾಧಿಸಬಹು ದೆಂದರು.

ಎಫ್‌ಟಿಎ ಕರ್ನಾಟಕ ಅಧ್ಯಾಯದ, ಐಟಿಎಸ್ ಸಹಾಯಕ ಡಿಜಿಎಫ್‌ಟಿ ಕಚೇರಿಯ ನಿರ್ದೇಶಕ ಕೆ.ಆದರ್ಶ್ ಕಾರ್ಯಕ್ರಮ ಕುರಿತು ಮಾತನಾಡಿದರು. ಕೈಗಾರಿಕಾ ಜಂಟಿ ಕೃಷಿ ನಿರ್ದೇಶಕ ವಿ.ಉಮೇಶ್ ಹಾಗು ಇತರರಿದ್ದರು.

ಪತ್ರಕರ್ತ ಜಯಕುಮಾರ್ ನಿಧನ

• ಪ್ರಜೋದಯ ವರದಿ

ಅರಕಲಗೂಡು: ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಉಪಾಧ್ಯಕ್ಷ ಬಸವಾಪಟ್ಟಣ ಜಯಕುಮಾರ್ (59) ಅವರು ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಸ್ವಗ್ರಾಮ ಬಸವಾ ಪಟ್ಟಣ ರುದ್ರಭೂಮಿಯಲ್ಲಿ ಶುಕ್ರವಾರ ಅಂತ್ಯಕ್ರಿಯೆ ನೆರವೇರಿತು. ಶಾಸಕ ಎ.ಮಂಜು, ಕಾಂಗ್ರೆಸ್ ಮುಖಂಡ ಹೆಚ್.ಪಿ.ಶ್ರೀಧರ್‌ಗೌಡ, ರಾಜ್ಯ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾ ಘಟಕ ಅಧ್ಯಕ್ಷ ಜೆ.ಆರ್.ಕೆಂಚೇಗೌಡ, ಮಾಜಿ ಅಧ್ಯಕ್ಷ ರವಿ ನಾಕಲಗೂಡು ಸೇರಿ ಇತರರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಅರಾಜಕತೆಗೆ ಕಾಂಗ್ರೆಸ್-ಕಾಕ್ರೋಚ್ ಯತ್ನ

ಶಿಕ್ಷಣ ಲೋಕ

ಶಿಕ್ಷೆ ನೀಡುವ ಮುಂಚೆ ಶಿಕ್ಷಕರಿಗಿರಲಿ ವಿವೇಚನೆ

“ರಾಜ್ಯ ಅಥವಾ ರಾಷ್ಟ್ರದಲ್ಲಿ ಈ ಘಟನೆಗಳು ಮಾತ್ರವೇ ಮೊದಲಲ್ಲ ಮತ್ತು ಕೊನೆಯೂ ಅಲ್ಲ. ಯುನಿಸೆಫ್ ವರದಿ 2023ರ ಪ್ರಕಾರ ಭಾರತದಲ್ಲಿ ಶೇ.53ರಷ್ಟು ಮಕ್ಕಳು ಶಾಲೆಯಲ್ಲಿ ಯಾವುದಾ ದರೂ ಒಂದು ರೀತಿಯ ದೌರ್ಜನ್ಯ ಅನುಭವಿಸುತ್ತಿದ್ದಾರೆ. ಅದರಲ್ಲಿ ಶೇ.65ರಷ್ಟು ಮಕ್ಕಳು ಭಯದಿಂದ ಯಾರಿಗೂ ಹೇಳುವುದಿಲ್ಲ. ಎನ್‌ಸಿಆರ್‌ಬಿ ಅಂದರೆ ನ್ಯಾಷನಲ್ ಕ್ರೈಂ ರೆಕಾರ್ಡ್ಸ್ ಬ್ಯೂರೋ ವರದಿಗಳ ಪ್ರಕಾರ ಪ್ರತಿ 15 ನಿಮಿಷಕ್ಕೆ ಒಂದು ಮಗು ಲೈಂಗಿಕ ದೌರ್ಜನ್ಯಕ್ಕೊಳಗಾಗುತ್ತಿದೆ ಮತ್ತು ಸರಾಸರಿ 50000ಕ್ಕೂ ಹೆಚ್ಚು ಪೋಕ್ಸೋ ಪ್ರಕರಣಗಳು ದಾಖಲಾಗುತ್ತಿವೆ. ಇದರಲ್ಲಿ ಶೇ.30ರಷ್ಟು ಶಾಲೆ/ಟ್ಯೂಷನ್/ಹಾಸ್ಟೆಲ್‌ಗೆ ಸಂಬಂಧಿಸಿದವುಗಳಾಗಿವೆ.



ಮಕ್ಕಳೆದೆಯ ಒಳಗೆ ಮಲಗಿರುವ ದೇವರನು ಎಬ್ಬಿಸಿ ನೋಡುವವನೇ ಗುರು ಎಂಬ ಮಾತಿದೆ. ಭಾರತೀಯ ಸಂಸ್ಕೃತಿಯು ಮಕ್ಕಳನ್ನು ದೇವರ ಸ್ವರೂಪ ಎಂದು ಲಾಗಾಯ್ತಿನಿಂದಲೂ ಭಾವಿಸಿದೆ. ಆದರೆ ಗುರು ಸ್ಥಾನದಲ್ಲಿರುವವರು ಅದೇ ದೇವರ ಮೇಲೆ ಅನುಮಾನ ಪಟ್ಟು ಅವಮಾನವೆಂಬ ಆಯುಧವನ್ನು ಝಳಪಿಸಿದರೆ ದೇವರು ಏನಾಗಬೇಡ!

ಘಟನೆ ಒಂದು: ಆನೇಕಲ್ ಬಳಿಯ ಹಳ್ಳಿಯೊಂದರ ಸರಕಾರಿ ಶಾಲೆಯಲ್ಲಿ 8ನೇ ತರಗತಿ ಓದುತ್ತಿದ್ದ 13 ವರ್ಷದ ಮಧುಶ್ರೀ ಎಂಬ ಹೆಸರಿನ ಮಗು ಡೆತ್ ನೋಟ್‌ನಲ್ಲಿ ಬರೆಯುತ್ತಾಳೆ: ನನ್ನ ಮೇಲೆ ಇಲ್ಲ ಸಲ್ಲದ ಆರೋಪಗಳನ್ನು ಹೊರಿಸಿದರು. ಅವಮಾನ ಸಹಿಸಿಕೊಂಡು ಬದುಕಲು ಆಗುತ್ತಿಲ್ಲ. ನನಗೆ ಈ ಭೂಮಿಯ ಮೇಲೆ ಬದುಕುವ ಅರ್ಹತೆ ಇಲ್ಲ. ನನ್ನ ಅಮ್ಮನನ್ನು ಯಾರೂ ಬೈಯಬೇಡಿ, ಎಲ್ಲರೂ ನನ್ನನ್ನು ಕ್ಷಮಿಸಿ... ಹೀಗೆ ಮೂರು ಪುಟಗಳನ್ನು ಬರೆದು ನೇಣಿಗೆ ಕೊರಳೊಡ್ಡಿದ್ದಾಳೆ. ಆ ಹೆಣ್ಣು ಮಗಳ ಮನಸ್ಸನ್ನು ಆರೋಪಕ್ಕೆ ಗುರಿಯಾಗಿರುವ ಆ ಶಿಕ್ಷಕಿ ಒಮ್ಮೆ ಓದಬಹುದಿತ್ತು. ಹಾಗೆ ಓದಿದ್ದಿದ್ದರೆ ಇಡೀ ಸಮಾಜ ಡೆತ್ ನೋಟ್ ಓದುವ ಸ್ಥಿತಿ ಬರುತ್ತಿರಲಿಲ್ಲ. ಆಕೆಯನ್ನು ಅವಮಾನಿಸುವ ಮೊದಲು ಆಕೆಯ ಜಾಗದಲ್ಲಿ ನಿಂತು ಒಮ್ಮೆ ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಬೇಕಿತ್ತು. ಹಾಗೆ ನಿಂತು ಅವಲೋಕಿಸಿದ್ದಿದ್ದರೆ ಇಂದು ಆ ಶಿಕ್ಷಕಿ ಅಪರಾಧಿ ಸ್ಥಾನದಲ್ಲಿ ನಿಲ್ಲುವ ಪ್ರಮೇಯ ಬರುತ್ತಿರಲಿಲ್ಲ.

ಘಟನೆ ಎರಡು: ಬೆಂಗಳೂರು ಉತ್ತರ ತಾಲ್ಲೂಕಿನ ಕಾಡಯರ್ರಪನಹಳ್ಳಿಯ ಖಾಸಗಿ ವಸತಿ ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿ ಶೌಚಾಲಯ ಮುಗಿಸಿ ಬೆಳಗಿನ ವ್ಯಾಯಾಮಕ್ಕೆ ಬರಲು ತಡವಾಗಿದೆ. ಇದೇ ಕಾರಣಕ್ಕೆ ದೈಹಿಕ ಶಿಕ್ಷಕರು ವಿವೇಚನೆ ಕಳೆದುಕೊಂಡು ಮನಬಂದಂತೆ ಕ್ರೂರವಾಗಿ ಹೊಡೆದಿದ್ದಾರೆ. ಇದರ ಪರಿಣಾಮ ವಿದ್ಯಾರ್ಥಿ ಮೃತಪಟ್ಟಿದ್ದಾನೆ ಎಂಬ ಆರೋಪ ಕೇಳಿ ಬಂದಿದೆ. ಈ ಎರಡೂ ಘಟನೆಗಳು ತನಿಖಾ ಹಂತದಲ್ಲಿವೆ.

ರಾಜ್ಯ ಅಥವಾ ರಾಷ್ಟ್ರದಲ್ಲಿ ಈ ಘಟನೆಗಳು ಮಾತ್ರವೇ ಮೊದಲಲ್ಲ ಮತ್ತು ಕೊನೆಯೂ ಅಲ್ಲ. ಯುನಿಸೆಫ್ ವರದಿ 2023ರ ಪ್ರಕಾರ, ಭಾರತದಲ್ಲಿ ಶೇ.53ರಷ್ಟು ಮಕ್ಕಳು ಶಾಲೆಯಲ್ಲಿ ಯಾವುದಾದರೂ ಒಂದು ರೀತಿಯ ದೌರ್ಜನ್ಯ ಅನುಭವಿಸುತ್ತಿದ್ದಾರೆ. ಅದರಲ್ಲಿ ಶೇ.65ರಷ್ಟು ಮಕ್ಕಳು ಭಯದಿಂದ ಯಾರಿಗೂ ಹೇಳುವುದಿಲ್ಲ. ಎನ್‌ಸಿಆರ್‌ಬಿ ಅಂದರೆ ನ್ಯಾಷನಲ್ ಕ್ರೈಂ ರೆಕಾರ್ಡ್ಸ್ ಬ್ಯೂರೋ ವರದಿಗಳ ಪ್ರಕಾರ ಪ್ರತಿ 15 ನಿಮಿಷಕ್ಕೆ ಒಂದು ಮಗು ಲೈಂಗಿಕ ದೌರ್ಜನ್ಯಕ್ಕೊಳಗಾಗುತ್ತಿದೆ ಮತ್ತು ಸರಾಸರಿ 50000ಕ್ಕೂ ಹೆಚ್ಚು ಪೋಕ್ಸೋ ಪ್ರಕರಣಗಳು ದಾಖಲಾಗುತ್ತಿವೆ. ಇದರಲ್ಲಿ ಶೇ.30ರಷ್ಟು ಶಾಲೆ/ಟ್ಯೂಷನ್/ಹಾಸ್ಟೆಲ್‌ಗೆ ಸಂಬಂಧಿಸಿದವುಗಳಾಗಿವೆ.

ಕೆಎಸ್‌ಸಿಪಿಸಿಆರ್ (ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ)ದ ಪ್ರಕಾರ ಕರ್ನಾಟಕ ದಲ್ಲಿ 2023-24ರಲ್ಲಿ 87 ಕಾರ್ಪೋರಲ್ ಪನಿಷ್ಮೆಂಟ್ ದೂರುಗಳು ದಾಖಲಾಗಿವೆ. 2022ರಿಂದ 25ರ ನಡುವೆ 200ಕ್ಕೂ ಹೆಚ್ಚು ಪೋಕ್ಸೋ ಪ್ರಕರಣಗಳು ದಾಖಲಾಗಿವೆ. 2024ರಲ್ಲಿ 18 ವರ್ಷದೊಳಗಿನ 1800 ವಿದ್ಯಾರ್ಥಿಗಳು ಶಾಲೆಗಳಲ್ಲಿನ ಒತ್ತಡ, ಅವಮಾನಗಳಂತಹ ಪ್ರಮುಖ ಮತ್ತು ಭಾಗಶಃ ಇವೇ ಕಾರಣಗಳು ಸೇರಿದಂತೆ ವಿವಿಧ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

2025ರ ಕರ್ನಾಟಕ ಚೈಲ್ಡ್ ರೈಟ್ಸ್ ಆರ್ಬ್ಸರ್ವೇಟರಿ ನಡೆಸಿದ ಅಧ್ಯಯನದಲ್ಲಿ 150 ಶಾಲೆಗಳ ವಿದ್ಯಾರ್ಥಿಗಳಲ್ಲಿ 38% ಮಕ್ಕಳು ತಮ್ಮ ಮೇಲೆ ದೈಹಿಕ ಶಿಕ್ಷೆ ಅಥವಾ ಸಾರ್ವಜನಿಕ ಅವಮಾನ, ಬೈಗುಳ, ಬೆತ್ತದಿಂದ ಹೊಡೆಯುವುದು ಮೊದಲಾದ ಶಿಕ್ಷೆಗಳು ನಡೆದಿವೆ ಎಂದು ತಿಳಿಸಿದ್ದಾರೆ. ಗ್ರಾಮೀಣ ಶಾಲೆಗಳಲ್ಲಿ ಇದು 45% ಇದ್ದರೆ, ನಗರ ಪ್ರದೇಶಗಳಲ್ಲಿ 32% ಎಂದು ವರದಿಯಾಗಿದೆ.

ಕರ್ನಾಟಕ ಸರಕಾರವು ವಸತಿ ಶಾಲೆಗಳು ಮತ್ತು ಹಾಸ್ಟೆಲ್‌ಗಳಲ್ಲಿ ಮಾನಸಿಕ ಹಿಂಸೆ, ದೈಹಿಕ ಹಿಂಸೆ, ಲೈಂಗಿಕ ದೌರ್ಜನ್ಯ, ಮಕ್ಕಳ ಮುಂದೆಯೇ ಅವಮಾನ, ನಿರ್ಲಕ್ಷ್ಯ, ಇವೇ ಮೊದಲಾದ ದೌರ್ಜನ್ಯಗಳಿಂದ ರಕ್ಷಿಸಲು ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಜಾರಿಗೊಳಿಸಿದೆ. ಆಲ್ಲದೆ ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸಲು ಸೂಚಿಸಿದೆ. ಆದರೆ ಇದು ಹೆಸರಿಗೆ ಮಾತ್ರ ಎನ್ನುವಂತಾಗಿದೆ. ಆರ್‌ಟಿಇ (ಶಿಕ್ಷಣದ ಹಕ್ಕು ಕಾಯ್ದೆ, 2009 ಸೆಕ್ಷನ್ 17 (1) ರ ಪ್ರಕಾರ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷೆ ನಿಷೇಧ, ಮಾನಸಿಕ ಕಿರುಕುಳ ನಿಷೇಧ, ಏಕಾಂತ ಶಿಕ್ಷೆ ನಿಷೇಧ, ಜಾತಿ, ಧರ್ಮ, ಬಡತನ, ಅಂಕಗಳ ಆಧಾರದ ಮೇಲೆ ತಾರತಮ್ಯ ಮತ್ತು ಅವಮಾನ ನಿಷೇಧ ಇದೆ. ಆದರೆ ಯಾರೂ ಅದನ್ನು ಪಾಲಿಸುತ್ತಿಲ್ಲ.

ಬಹುತೇಕ ಶಾಲೆಗಳಲ್ಲಿ ಸಿಸಿಟಿವಿ, ದೂರು ಪೆಟ್ಟಿಗೆ, ಆಪ್ತ ಸಮಾಲೋಚಕರು ಇಲ್ಲದ ಕಾರಣ ಬಹಳಷ್ಟು ಪ್ರಕರಣಗಳು ಆಚೆಗೆ ಬರುವುದಿಲ್ಲ. ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016ರ ಪ್ರಕಾರ, ಪ್ರತಿ ಶಾಲೆಯಲ್ಲಿ 5 ರಿಂದ 7 ಜನರ ಮಕ್ಕಳ ರಕ್ಷಣಾ ಸಮಿತಿ ಇರಬೇಕು. ಮಕ್ಕಳ ಹೆಸರು ನಮೂದಿಸದೇ ದೂರು ಹಾಕಲು ದೂರು ಪೆಟ್ಟಿಗೆ ಇರಬೇಕು. ಶಾಲೆಗಳ ಕಾರಿಡಾರ್, ಗ್ರೌಂಡ್, ತರಗತಿ ಕೊಠಡಿಗಳಲ್ಲಿ ಸಿಸಿಟಿವಿ ಅಳವಡಿಸಿರಬೇಕು.

ಮಾನಸಿಕ ತಜ್ಞರು ಮತ್ತು ಆಪ್ತ ಸಮಾಲೋಚಕರಿಂದ ಮಕ್ಕಳನ್ನು ವಾರಕ್ಕೊಮ್ಮೆ ಸಮಾಲೋಚನೆ ಗೊಳಪಡಿಸಬೇಕು. ಪ್ರತಿ 3 ತಿಂಗಳಿಗೊಮ್ಮೆ ಟೀಚರ್ ಮತ್ತು ಸಿಬ್ಬಂದಿಗೆ ಪೋಕ್ಸೋ ನಿಯಮಗಳ ತರಬೇತಿ ನೀಡಬೇಕು. ಮಗು ಗಾಯಗೊಂಡರೆ ಅಥವಾ ಅಸ್ವಸ್ಥತೆಗೊಳಗಾದರೆ 2 ಗಂಟೆಗಳೊಳಗೆ ಪೋಷಕರಿಗೆ ಮಾಹಿತಿ ನೀಡಬೇಕು- ಇಷ್ಟೆಲ್ಲಾ ನಿಯಮಗಳಿವೆ.

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ ಸಮೀಕ್ಷೆ ಪ್ರಕಾರ ಶೇ. 30ರಿಂದ 40 ಶಾಲೆಗಳು ಮಾತ್ರವೇ ಇದನ್ನು ಪೂರ್ಣವಾಗಿ ಜಾರಿ ಮಾಡಿವೆ. ಶಿಕ್ಷಕರಿಗೆ ಮೊದಲು ಬೇಕಾದುದು ಸಂವೇದನಾ ಶೀಲತೆ ಮತ್ತು ತಾಳ್ಮೆ. ಪರಿಸ್ಥಿತಿಗಳನ್ನು ಅವಲೋಕಿಸುವ ನಯಗಾರಿಕೆ. ಯಾವುದೇ ಶಿಕ್ಷಕನಾಗಲೀ ತಾನು ಶಿಕ್ಷೆ ಕೊಡುವ ಮುಂಚೆ ಒಂದಿಷ್ಟು ತಿತಿಕ್ಷೆಯನ್ನು ಹೊಂದಿರಬೇಕು. ಹೊಡೆಯಲೇಬೇಕಾದ ಅನಿವಾರ್ಯತೆ ಬಂದಾಗ ವಿದ್ಯಾರ್ಥಿ ಮಾಡಿರುವ ತಪ್ಪಾದರೂ ಯಾವುದು? ಯಾಕಾಗಿ ಹೊಡೆಯುತ್ತಿದ್ದೇನೆ, ಹೇಗೆ, ಯಾವುದರಲ್ಲಿ ಮತ್ತು ಯಾವ ಭಾಗಕ್ಕೆ ಹೊಡೆಯುತ್ತಿದ್ದೇನೆ ಎಂಬ ಪರಿಜ್ಞಾನ ಇರಬೇಕು. ಬೈಯಲು ಬಳಸುವ ಮಾತುಗಳಲ್ಲಿ ಸಂಸ್ಕಾರ ಇರಬೇಕು. ಮಾತುಗಳು ಮಕ್ಕಳ ಮನಸ್ಸಿನ ಪರಿವರ್ತನೆಗೆ ಕಾರಣವಾಗಬೇಕೇ ಹೊರತು ಜೀವಕ್ಕೇ ಕುತ್ತು ತರುವಂತಿರಬಾರದು.

ಶಿಕ್ಷಕ ಇರುವುದು ಶಿಕ್ಷಣ ನೀಡಲೇ ಹೊರತು ಶಿಕ್ಷೆ ನೀಡಲು ಅಲ್ಲ. ಶಾಲೆ ಮತ್ತು ಶಿಕ್ಷಕ ಇರುವುದು ಮಕ್ಕಳನ್ನು ತಿದ್ದಿ ತೀಡುವ ಮೂಲಕ ಕಲಿಸುವುದಕ್ಕೇ ಹೊರತು, ಶಾಶ್ವತವಾಗಿ ಮನೆಗೋ ಅಥವಾ ಪರಲೋಕಕ್ಕೋ ಕಳಿಸುವಂತಹ ಸನ್ನಿವೇಶ ಸೃಷ್ಟಿಸುವುದಕ್ಕಲ್ಲ. ಶಿಕ್ಷಕರಿಗೆ ಮನೆಯಲ್ಲಿ ಮತ್ತು ಬದುಕಿನಲ್ಲಿ ನೂರಾರು ಸಮಸ್ಯೆಗಳಿರಬಹುದು, ವೈಯುಕ್ತಿಕವಾಗಿ ಸಾವಿರಾರು ಒತ್ತಡಗಳಿರಬಹುದು. ಆದರೆ ಶಾಲಾ ಆವರಣ ಪ್ರವೇಶಿಸುವ ಮೊದಲು ಅವೆಲ್ಲವನ್ನೂ ಆಚೆಯೇ ಬಿಟ್ಟು ಕೇವಲ ಗುರುವಾಗಿಯಷ್ಟೇ ಪ್ರವೇಶಿಸಬೇಕು.

ಅಷ್ಟೇ ಅಲ್ಲ ತರಗತಿ ಪ್ರವೇಶಿಸುವ ಮೊದಲು ಕಚೇರಿ ರಾಜಕೀಯ, ಸಿಬ್ಬಂದಿಗಳ ನಡುವಿನ ಸಣ್ಣ ಸಣ್ಣ ಕಲಹಗಳು ಅಥವಾ ಇನ್ನಿತರೆ ತಿಕ್ಕಾಟಗಳು ಎಲ್ಲವನ್ನೂ ಬಿಟ್ಟು ಕೇವಲ ಅಂದರೆ ಕೇವಲ ಸದ್ಗುರುವಾಗಿ ಮಾತ್ರವೇ ಪ್ರವೇಶಿಸಬೇಕು. ಪಾಠ ಹೇಳುವುದಕ್ಕಿಂತ ಮುಖ್ಯವಾಗಿ ಜೀವನದ ದಾರಿ ತೋರಿಸುವ ಕೈಗಂಬವಾಗಬೇಕು. ಬದುಕುವ ರೀತಿಯನ್ನು ಕಲಿಸುವುದರೊಂದಿಗೆ ತಾನೂ ಸನ್ಮಾರ್ಗದಲ್ಲಿ ನಡೆಯುವ ಮೂಲಕ ಅಕ್ಷರ, ಆಚಾರ ಮತ್ತು ಆತ್ಮಜ್ಞಾನ ಮೂರನ್ನೂ ಕೊಡಬೇಕು. ತನ್ನ ಮಾತು ಮತ್ತು ನಡತೆ ಎರಡರ ಮೂಲಕವೂ ಸನ್ಮಾರ್ಗ ತೋರಬೇಕು ಮತ್ತು ಸಂಸ್ಕಾರ ಕಲಿಸಬೇಕು.

ಸಾಮಾನ್ಯವಾಗಿ ಶಿಕ್ಷಕರಾದವರು ಮಕ್ಕಳಿಗೆ ಶಿಕ್ಷೆ ನೀಡುವುದು ಹೋಂ ವರ್ಕ್ ಮಾಡದೇ ಇದ್ದಾಗ, ಕಿರು ಪರೀಕ್ಷೆ ಅಥವಾ ಘಟಕ ಪರೀಕ್ಷೆಗಳಲ್ಲಿ ಕಾಪಿ ಮಾಡಿದ್ದಾಗ, ಓದುವುದರಲ್ಲಿ ಹಿಂದುಳಿದಿದ್ದಾಗ ಇವೇ ವಿಚಾರಗಳಿಗೆ. ಕಾಪಿ ಮಾಡುವುದನ್ನು ಕಲಿಸಿದವರು ಅಥವಾ ಆ ರೀತಿಯ ಮನಸ್ಥಿತಿ ಬರುವ ಹಾಗೆ ಮಾಡಿದವರು ಯಾರು? ಮಕ್ಕಳ ಮೇಲೆ ಅಂಕಗಳಿಗೆ ಒತ್ತಡ ಹೆಚ್ಚಾದಾಗ, ಆ ಅಂಕಗಳು ಬಾರದೇ ಹೋದಾಗ ಶಿಕ್ಷೆ ನೀಡುವುದು ಕಾಮನ್ ಆದಾಗ, ಆ ಶಿಕ್ಷೆಯಿಂದ ಪಾರಾಗಲು (ಓದಿನಲ್ಲಿ ಹಿಂದುಳಿದವರು) ಕಾಪಿ ಮಾರ್ಗವನ್ನು ಹಿಡಿಯುತ್ತಾರೆ.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವ ಶಿಕ್ಷಕರು, ಒಂದು ವೇಳೆ ವಿದ್ಯಾರ್ಥಿ ಪಕ್ಕಕ್ಕೆ ತಿರುಗಿದ್ದರು ಅಥವಾ ಪೆನ್ಸಿಲ್, ಎರೇಸರ್ ಪಡೆಯಲು ಪಕ್ಕದವರನ್ನು ಮಾತಾಡಿಸಿದರು ಎಂದ ಮಾತ್ರಕ್ಕೆ, ಕಾಪಿ ಮಾಡಿಲ್ಲ ಎಂಬ ಸತ್ಯವನ್ನು ಮಕ್ಕಳು ಪ್ರಾಮಾಣಿಕವಾಗಿ ಒಪ್ಪಿಕೊಂಡರೂ



ಕೇಳಿಸಿಕೊಳ್ಳುವ ಅಥವಾ ಅದನ್ನು ಒಪ್ಪಿಕೊಳ್ಳುವ ದೊಡ್ಡತನ ಮೆರೆಯು ವುದಿಲ್ಲ. ನಾನಷ್ಟೇ ಸರಿ ಮತ್ತು ನಾನು ಹೇಳಿದ್ದಷ್ಟೇ ಸರಿ ಎಂಬ ಸ್ವ-ಪ್ರತಿಷ್ಠೆಗೆ ಬೀಳುತ್ತಾರೆ.

ಇತ್ತೀಚೆಗೆ ನನಗೆ ಗೊತ್ತಿರುವ ಒಬ್ಬ ವಿದ್ಯಾರ್ಥಿಗೆ ಹೀಗೇ ಆಗಿತ್ತು, ಆ ವಿದ್ಯಾರ್ಥಿ ಕಾಪಿ ಮಾಡಿರಲಿಲ್ಲ. ಈ ಹಿಂದೆ ಮಾಡಿದ ಉದಾಹರಣೆಗಳೂ ಇಲ್ಲ. ತರಗತಿ ಹಂತದ ಕಿರು ಪರೀಕ್ಷೆ ಬರೆಯುವಾಗ ಹಿಂದಿನವರು ಮಾತಾಡಿಸಿದರು ಎಂದು ಈಕೆ ಹಿಂದೆ ತಿರುಗಿದ್ದಾಳೆ. ಅದನ್ನು ಗಮನಿಸಿದ ಶಿಕ್ಷಕಿ ಕಾಪಿ ಮಾಡಿದ್ದೀಯ ಎಂದು ಎಲ್ಲಾ ವಿದ್ಯಾರ್ಥಿಗಳ ಮುಂದೆ ಬಹಳ ವಾದಿಸಿದ್ದಾರೆ. ಆಗ ಆ ವಿದ್ಯಾರ್ಥಿ ಬೇಕಿದ್ದಲ್ಲಿ ಸಿಸಿ ಕೆಮರಾ ಪರಿಶೀಲಿಸಿ ಮ್ಯಾಡಂ ಎಂದಿದ್ದಾರೆ.

ಪ್ರಾಂಶುಪಾಲರ ಸಮ್ಮುಖದಲ್ಲಿ ಪರಿಶೀಲನೆಯೂ ನಡೆದಿದೆ. ಅಲ್ಲಿ ಸತ್ಯ ಸಾಬೀತಾಗಿದೆ. ಆದರೆ ಶಿಕ್ಷಕಿಗೆ ಈಗೋ ಹರ್ಟ್ ಆಗಿರಬಹುದು, ವಿದ್ಯಾರ್ಥಿಯ ಡೈರಿಯಲ್ಲಿ ನಿಮ್ಮ ಮಗಳು ಕಾಪಿ ಮಾಡಿದ್ದಾಳೆ, ಆಕೆಗೆ ಬುದ್ಧಿ ಹೇಳಿ ಎಂದು ಬರೆದು ಪೋಷಕರಿಗೆ ಕಳಿಸಿದ್ದಾರೆ. ಹಾಗೆಯೇ ಯೋಚಿಸಿ ನೋಡಿ, ಕೌಮಾರ್ಯವನ್ನಿನ್ನೂ ದಾಟಿರದ ವಿದ್ಯಾರ್ಥಿಯ ಸೂಕ್ಷ್ಮ ಮನಸ್ಸಿನಲ್ಲಿ ಎಂತಹ ಪ್ರಕ್ಷುಬ್ಧತೆ ಉಂಟಾಗಿರಬಹುದು! ತನ್ನ ಸಹಪಾಠಿಗಳ ಮುಂದೆ ತನಗೆ ಅವಮಾನವಾಯಿತೆಂದು ಇಂತಹ ಸಂದರ್ಭಗಳಲ್ಲಿ ಮಕ್ಕಳು ಕೆಟ್ಟ ನಿರ್ಧಾರಗಳಿಗೆ ಮುಂದಾಗುವುದಿಲ್ಲವೇ? ಇಂತಹ ಪ್ರಚೋದನೆಗಳು ಬೇಕಂತಲೇ ಆಗುವುದಿಲ್ಲ.

ಯಾವ ಶಿಕ್ಷಕರಿಗೂ ಆ ಕೆಟ್ಟ ಮನಸ್ಥಿತಿ ಇರುವುದಿಲ್ಲ. ಆದರೆ ಶಿಕ್ಷಕರಲ್ಲಿ ವಿವೇಚನೆ ಕೈಕೊಟ್ಟಾಗ, ತಾಳ್ಮೆ ಇಲ್ಲದೇ ಹೋದಾಗ, ಇಗೋ ಎಂಬ ಎರಡಕ್ಷರ ಬೃಹದಾಕಾರವಾಗಿ ಬೆಳೆದು ನಿಂತಾಗ ಇಂತಹ ಅಪಸವ್ಯಗಳು ಜರುಗುತ್ತವೆ. ಸರಕಾರವಾಗಲೀ, ಆಡಳಿತ ಮಂಡಳಿಗಳಾಗಲೀ ಶಿಕ್ಷಕರನ್ನು ತರಗತಿಗಳಿಗೆ ಬಿಡುವ ಮುಂಚೆ ಅವರಿಗೆ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳುವ, ಮಕ್ಕಳನ್ನು ಸೂಕ್ಷ್ಮವಾಗಿ ನಿಭಾಯಿಸುವ, ಮಕ್ಕಳ ಮನಸ್ಸನ್ನು ಅರಿತುಕೊಳ್ಳುವ, ಅವರನ್ನೂ ತನ್ನ ಸ್ವಂತ ಮಕ್ಕಳಂತೆಯೇ ಕಕ್ಕುಲಾತಿ ತೋರುವ ತರಬೇತಿಗಳನ್ನು ನೀಡಲೇಬೇಕಾದ ಅನಿವಾರ್ಯತೆ ಮತ್ತು ಜರೂರತ್ತು ಎರಡೂ ಇವೆ.

ಮಕ್ಕಳು ಮಣ್ಣಿನ ಮುದ್ದೆಯಂತೆ ಅದಕ್ಕೆ ಸುಂದರ ರೂಪ ಕೊಡುವ ಜವಾಬ್ದಾರಿ ಹೆತ್ತವರಿಗಿಂತ ಶಿಕ್ಷಕರಿಗೇ ಜಾಸ್ತಿ. ಹೀಗಾಗಿಯೇ ಶಿಕ್ಷಣಕ್ಕೆ ಇನ್ನಿಲ್ಲದ ಮಹತ್ವವನ್ನು ಈ ಸಮಾಜ ನೀಡುತ್ತಿದೆ. ಹಾಗಾಗಿ ಶಿಕ್ಷಕರಾದವರು ಮಾಡಬೇಕಾದ ಮೊದಲ ಕೆಲಸ ಮಕ್ಕಳಿಗೆ ಬದುಕಿನ ಮೇಲೆ ಪ್ರೀತಿ ಹುಟ್ಟಿಸುವುದು, ಕಲಿಕೆಯ ಮೇಲೆ ಆಸಕ್ತಿ ಮೂಡಿಸುವುದು. ಸೋಲನ್ನು ಒಪ್ಪಿಕೊಳ್ಳುವುದು ಮತ್ತು ಅದನ್ನು ಎದುರಿಸುವುದು, ಅಂಕಗಳೇ ಮುಖ್ಯವಲ್ಲ, ಅಂಕಗಳಿಂದಾಚೆಗೂ ಬದುಕು ಇದೆ ಎಂಬ ವಾಸ್ತವವನ್ನು ಅರಿವಾಗಿಸುವುದು.

ಶಿಸ್ತು ಎಂಬ ಹೆಸರಿನಲ್ಲಿ ನಡೆಯುವ ದೌರ್ಜನ್ಯ ಶಿಕ್ಷಣವಲ್ಲ, ಅದು ಮಕ್ಕಳ ಮನಸ್ಸು ಮತ್ತು ಭವಿತ ವ್ಯದ ಮೇಲಿನ ದಾಳಿ. ಮಕ್ಕಳಿರುವುದೇ ತಪ್ಪು ಮಾಡಲು. ತಪ್ಪು ಮಾಡಲೂ ಸ್ವಾತಂತ್ರ್ಯ ಇಲ್ಲದ ಮೇಲೆ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ ಎಂಬ ಮಾತಿದೆ. ಹಾಗಾಗಿ ಮಕ್ಕಳ ತಪ್ಪುಗಳನ್ನು ತಿದ್ದಿ ಮತ್ತು ಅದನ್ನು ತಿಳಿ ಹೇಳಬೇಕಾದ ಹೊಣೆಗಾರಿಕೆ ಶಿಕ್ಷಕರದ್ದು.

ತಪ್ಪಿಗೆ ಶಿಕ್ಷೆ ನೀಡುತ್ತಾ ಹೋದರೆ ಭರಿಸಲಾರದವರು ಕೆಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಭರಿಸಿದವರು ಮುಂದೆ ತಪ್ಪಿಗೆ ಶಿಕ್ಷೆ ನೀಡಲೇಬೇಕು ಎಂದು ಅವರೂ ಕೂಡ ಶಿಕ್ಷೆ ನೀಡಲು ಪ್ರಾರಂಭಿಸುತ್ತಾರೆ. ಶಾಲೆ ಶಿಕ್ಷಣ ಕೊಡುವ ಮತ್ತು ಸ್ವೀಕರಿಸುವ ಜಾಗ, ಜೈಲಲ್ಲ. ಅಲ್ಲಿಗೆ ಮಕ್ಕಳು ಕನಸುಗಳೊಂದಿಗೆ ಹೋಗಬೇಕೇ ಹೊರತು ಭಯದಿಂದಲ್ಲ. ಶಾಲೆಗಳಲ್ಲಿ ಒತ್ತಡ ರಹಿತ ಮತ್ತು ಭಯರಹಿತ ವಾತಾವರಣ ನಿರ್ಮಾಣವಾಗಬೇಕು.

- ಶ್ರೀನಿವಾಸಮೂರ್ತಿ ಎನ್ ಸುಂಡ್ರಹಳ್ಳಿ

ಏಕೆ ಹೀಗೆ ನಮ್ಮ ನಡುವೆ...

ತಾಯಿಯ ಎದೆ ಹಾಲು ಕುಡಿದು, ಈ ನೆಲದ ಗಾಳಿ ನೀರು ಸೇವಿಸಿ, ತಂದೆಯ ತೋಳುಗಳಲ್ಲಿ, ಅಕ್ಕ ಅಣ್ಣನ ನೆರಳಲ್ಲಿ, ಶಿಕ್ಷಕರ ಮಾರ್ಗದರ್ಶನದಲ್ಲಿ ಮುದ್ದಿನಿಂದ ಬೆಳೆವ ಮಗು ಮನುಷ್ಯನಾಗದೆ ರಾಕ್ಷಸನನ್ನೂ ಮೀರಿದ ರಕ್ಕಸತನದಿಂದ ವರ್ತಿಸುತ್ತಿರುವುದು ಏಕೆ?

ಇತ್ತೀಚೆಗೆ ಅತ್ಯಂತ ಕ್ರೌರ್ಯ - ಹೇಯ - ಬರ್ಬರವಾಗಿ ಕೊಲೆಗಳಾಗುತ್ತಿರುವ - ಕೊಲ್ಲುತ್ತಿರುವ ಘಟನೆಗಳು ಭಾರತದ ಬೇರೆ ಬೇರೆ ಕಡೆಗಳಿಂದ ವರದಿಯಾಗುತ್ತಿದೆ. 50 ಬಾರಿ ತಿವಿದ, ನೂರು ತುಂಡುಗಳಾಗಿ ಕತ್ತರಿಸಿದ, ಶೀತಲೀಕರಣದಲ್ಲಿಟ್ಟ, ಸೂಟ್ ಕೇಸಿನಲ್ಲಿಟ್ಟಿದ್ದ, ತಂದೂರಿ ಒಲೆಯಲ್ಲಿ ಸುಟ್ಟ, ರಕ್ತ ಕುಡಿದ, ಕರೆಂಟ್ ಶಾಕ್ ನೀಡ

ವಿದ್ಯೆಯಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ

ಉತ್ತಮ ಶಿಕ್ಷಣ ಪಡೆದ ವ್ಯಕ್ತಿ ಜೀವನದಲ್ಲಿ ಎಂದಿಗೂ ಹಿಂದುಳಿಯುವುದಿಲ್ಲ: ಶಾಸಕ ಎ.ಮಂಜು

• ಪ್ರಜೋದಯ ವರದಿ

ಅರಕಲಗೂಡು: ಸಮಾಜದಲ್ಲಿ ಬದಲಾವಣೆ ಹಾಗೂ ದೇಶದ ಅಭಿವೃದ್ಧಿ ಸಾಧಿಸಬೇಕಾದರೆ ಅದು ವಿದ್ಯೆಯಿಂದ ಮಾತ್ರ ಸಾಧ್ಯ ಎಂದು ಶಾಸಕ ಎ. ಮಂಜು ತಿಳಿಸಿದರು.

ಪಟ್ಟಣದ ಹೊರವಲಯದಲ್ಲಿರುವ ಡಿ.ಕೆ. ಸಮುದಾಯ ಭವನದಲ್ಲಿ ಶುಕ್ರವಾರ ನಡೆದ ಬಿಜಿಎಸ್ ಕಾಲೇಜಿನ ಪ್ರೆಸಿರ್ಸ್ ಪಾರ್ಟಿ ಕಾರ್ಯಕ್ರಮ ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣ ಪ್ರತಿಯೊಬ್ಬರ ಜೀವನದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ವಿದ್ಯೆಯನ್ನು ಯಾರೂ ಕದಿಯಲು ಸಾಧ್ಯವಿಲ್ಲ. ಉತ್ತಮ ಶಿಕ್ಷಣ ಪಡೆದ ವ್ಯಕ್ತಿ ಜೀವನದಲ್ಲಿ ಎಂದಿಗೂ ಹಿಂದುಳಿಯುವುದಿಲ್ಲ. ಶಿಕ್ಷಣವಿಲ್ಲದ ಬದುಕು ಶೂನ್ಯವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

ಮೊದಲು ನಾವು ಬದಲಾಗಬೇಕು ನಮ್ಮಲ್ಲಿ ಬದಲಾವಣೆ ಬಂದರೆ ಕುಟುಂಬದಲ್ಲಿ ಬದಲಾವಣೆ ಉಂಟಾಗುತ್ತದೆ. ಕುಟುಂಬದಲ್ಲಿ ಬದಲಾವಣೆ ಬಂದರೆ ದೇಶದಲ್ಲಿಯೂ ಬದಲಾವಣೆ

ತರಲು ಸಾಧ್ಯವಾಗುತ್ತದೆ. ಪ್ರೌಢಶಾಲೆ ಹಾಗೂ ಕಾಲೇಜು ಹಂತಗಳು ವಿದ್ಯಾರ್ಥಿಗಳ ಜೀವನದಲ್ಲಿ ಪ್ರಮುಖ ಘಟ್ಟಗಳಾಗಿದ್ದು, ವಿದ್ಯಾರ್ಥಿಗಳು ಗುರಿಯೊಂದಿಗೆ ಕನಸು ಕಾಣಬೇಕು. ಆ ಕನಸುಗಳು ಸಾಧನೆಯ ಹಾದಿಯನ್ನು ತೋರಿಸುತ್ತವೆ ಎಂದು ಕಿವಿಮಾತು ಹೇಳಿದರಲ್ಲದೆ, ಶೈಕ್ಷಣಿಕ ಕ್ಷೇತ್ರಕ್ಕೆ ಬಿಜಿಎಸ್ ಸಂಸ್ಥಾನದ ಕೊಡುಗೆ ಅಪಾರವಾಗಿದ್ದು, ಸಂಸ್ಥೆಯ ಸಾಧನೆ ಶ್ಲಾಘನೀಯವಾಗಿದೆ ಎಂದರು.

ಆದಿಚುಂಚನಗಿರಿ ಟ್ರಸ್ಟ್‌ನ ಆಡಳಿತಾಧಿಕಾರಿ ಎ.ಟಿ. ಶಿವರಾಂ ಮಾತನಾಡಿ, ತಂದೆ-ತಾಯಿಯರ ಆಶಯಗಳನ್ನು ಈಡೇರಿಸುವುದು ಮಕ್ಕಳ ಕರ್ತವ್ಯವಾಗಿದೆ. ಅವರನ್ನು ಗೌರವಿಸಿ, ಪ್ರೀತಿಯಿಂದ ಕಾಣುವುದೇ ನಿಜವಾದ ಸಂಸ್ಕಾರ ಎಂದು ಅವರು ಹೇಳಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಮಾತನಾಡಿ, ಬಡತನದಲ್ಲಿದ್ದರೂ ತಂದೆ- ತಾಯಿಯರು ತಮ್ಮ ಮಕ್ಕಳನ್ನು ಉತ್ತಮ ಕಾಲೇಜುಗಳಲ್ಲಿ ಓದಿಸಲು ಶ್ರಮಿಸುತ್ತಾರೆ. ಅವರ ನಂಬಿಕೆಯನ್ನು ಉಳಿಸುವುದು ಹಾಗೂ ಕಾಲೇಜಿನ ಆಡಳಿತ ಮಂಡಳಿಯ ಗೌರವವನ್ನು ಹೆಚ್ಚಿಸುವ ರೀತಿಯಲ್ಲಿ ಉತ್ತಮ ಫಲಿತಾಂಶ ಗಳಿಸಿ ಕೀರ್ತಿ ತರುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಗುರುಗಳು ವಿದ್ಯಾರ್ಥಿಗಳನ್ನು ತಿದ್ದುವ ಉದ್ದೇಶದಿಂದ ನೀಡುವ ಶಿಕ್ಷೆಯನ್ನು ಮಕ್ಕಳು ಹಾಗೂ ಪೋಷಕರು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಮಕ್ಕಳಿಗೆ ಶಿಕ್ಷಣದ ಜೊತೆಗೆ ಸರಿಯಾದ ಸಂಸ್ಕಾರ ನೀಡದಿದ್ದರೆ ಅವರ ಭವಿಷ್ಯಕ್ಕೆ ತೊಂದರೆಯಾಗಬಹುದು. ಗುರುವಿನ ಮಾತನ್ನು ಗೌರವಿಸುವ ವಿದ್ಯಾರ್ಥಿ ತನ್ನ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳುತ್ತಾನೆ ಎಂದು ಸ್ವಾಮೀಜಿ ಅವರು ತಿಳಿಸಿದರು.

ಕೇವಲ ಎಂಜಿನಿಯರಿಂಗ್ ಅಥವಾ ವೈದ್ಯಕೀಯ ಕ್ಷೇತ್ರಗಳಲ್ಲದೆ, ವಿದ್ಯಾರ್ಥಿಗಳಿಗೆ ವಿವಿಧ ಕ್ಷೇತ್ರಗಳಲ್ಲಿ ಸಾಕಷ್ಟು ಅವಕಾಶಗಳಿವೆ. ತಮ್ಮ ಆಸಕ್ತಿ ಹಾಗೂ ಸಾಮರ್ಥ್ಯಕ್ಕೆ ಅನುಗುಣವಾಗಿ ಸರಿಯಾದ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ ವಿದ್ಯಾರ್ಥಿಗಳು ಅರಿವು ಹೊಂದಬೇಕು ಎಂದು ಹೇಳಿದರಲ್ಲದೆ, ಯಾವುದೇ ವಿಷಯ ವನ್ನಾದರೂ ಗಮನವಿಟ್ಟು ಆಲಿಸಿ ನಂತರ ಮನೆಯಲ್ಲಿ ಅಭ್ಯಸಿಸಿದಾಗ ಮಾತ್ರ ಯಾವುದೇ ವಿಷಯದಲ್ಲೂ ಯಶಸ್ಸು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಕೆ.ಸಿ. ಸೌಮ್ಯ ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಎಚ್. ಮಹೇಶ್ ಪ್ರಾಸ್ತಾವಿಕ ನುಡಿಗಳ ನ್ನಾಡಿದರು. ಮಾಜಿ ಪಪಂ ಉಪಾಧ್ಯಕ್ಷೆ ರಶ್ಮಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಬಳಿಕ ವಿದ್ಯಾರ್ಥಿ ಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯ ಕ್ರಮಗಳು ಜರುಗಿದವು.

ನೀಟ್ ಗೊಂದಲ: ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಎಚ್ಚರಿಕೆ

• ಪ್ರಜೋದಯ ವರದಿ

ನವದೆಹಲಿ: ವೈದ್ಯಕೀಯ ಪ್ರವೇಶ ಪರೀಕ್ಷೆ ನೀಟ್-ಯುಜಿ ಸುತ್ತಲಿನ ಅಕ್ರಮ, ಗೊಂದಲಗಳ ಸರಣಿಯನ್ನು ತಕ್ಷಣವೇ ಕೊನೆಗೊಳಿಸಬೇಕೆಂದು ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ಖಡಕ್ ಸೂಚನೆ ನೀಡಿದೆ.ನಾವು ಈ ವ್ಯವಸ್ಥೆಯನ್ನು ಹೀಗೆಯೇ ಮುಂದು ವರಿಯಲು ಬಿಡುವುದಿಲ್ಲ ಎಂದು ಎಚ್ಚರಿಸಿರುವ ನ್ಯಾಯಾಲಯ, ಪರೀಕ್ಷಾ ಅಕ್ರಮಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವಂತೆ ಅಡಳಿತಕ್ಕೆ ನಿರ್ದೇಶಿಸಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್ .ನರಸಿಂಹ ಮತ್ತು ಆಲೋಕ್ ಆರಾಧೆ ಅವರಿದ್ದ ಪೀಠವು ವಿಚಾರಣೆ ನಡೆಸಿದ್ದು, ಪರೀಕ್ಷಾ ಅಕ್ರಮ ತಡೆಯುವ ಪ್ರಕ್ರಿಯೆಯನ್ನು ನ್ಯಾಯಾಲಯವು ಬಹಳ ನಿಕಟವಾಗಿ ಮೇಲ್ವಿಚಾರಣೆ ಮಾಡಲಿದೆ ಮತ್ತು ನಿಯಮಿತವಾಗಿ ಪರಿಶೀಲಿಸಲಿದೆ ಎಂದು ಸ್ಪಷ್ಟಪಡಿಸಿದೆ. ಪರೀಕ್ಷೆಯನ್ನು ಸಂಪೂರ್ಣವಾಗಿ ಆನ್‌ಲೈನ್ ಆಥವಾ ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಬದಲಾಯಿಸುವ ಯೋಜನೆಯ ಕುರಿತು ಕೇಂದ್ರದಿಂದ ಸುಪ್ರೀಂಕೋರ್ಟ್ ವಿವರಣೆ ಕೇಳಿದೆ.

ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಬದಲಾಯಿಸಿದಾಗ ಅಭ್ಯರ್ಥಿಗಳ ಡೇಟಾ ಹಾಗೂ ಪ್ರಶ್ನೆ ಪತ್ರಿಕೆಯ ಭದ್ರತೆಯನ್ನು ಹೇಗೆ ಕಾಪಾಡುತ್ತೀರಿ?

ಪ್ರಕ್ರಿಯೆಯ ಪ್ರತಿಯೊಂದು ಹಂತವೂ ಸಾಂಸ್ಥಿಕವಾಗಿ ಮತ್ತು ಪಾರದರ್ಶಕ ವಾಗಿ ನಡೆಯುವುದನ್ನು ಖಚಿತಪಡಿಸಿ ಕೊಳ್ಳುವುದು ನ್ಯಾಯಾಲಯದ ಮುಖ್ಯ ಉದ್ದೇಶವಾಗಿದೆ.

ಇದಕ್ಕೆ ಸ್ಪಂದಿಸಿದ ಕೇಂದ್ರ ಸರ್ಕಾರದ ಪರ ಭಾರತದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ವಿದ್ಯಾರ್ಥಿಗಳ ಹಿತರಕ್ಷಣೆ ಮತ್ತು ಅವರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ 10 ಹೆಜ್ಜೆ ಹೆಚ್ಚುವರಿ ಯಾಗಿ ಡಲು ಸಿದ್ಧವಿದೆ ಎಂದು ಪೀಠಕ್ಕೆ ತಿಳಿಸಿ, ಪ್ರಕರಣದ ಕುರಿತು ಸುಪ್ರೀಂಕೋರ್ಟ್‌ಗೆ ಸಾಕ್ಷ್ಯಾಧಾರಿತ ಹಾಗೂ ಸಮಗ್ರ ದೃಷ್ಟಿಕೋನ ವನ್ನು ಮಂಡಿಸಲು ನ್ಯಾಯಾಲಯದಿಂದ ಸ್ವಲ್ಪ ಕಾಲಾವಕಾಶ ಕೋರಿದರು.

ಸುಪ್ರೀಂ ಕೋರ್ಟ್ ಈ ಪ್ರಕರಣದ ಮುಂದಿನ ವಿಚಾರಣೆಯನ್ನು ಜುಲೈ 27ಕ್ಕೆ ನಿಗದಿಪಡಿಸಿದೆ. ಒಂದೆಡೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದರೆ, ಇನ್ನೊಂದೆಡೆ ದೆಹಲಿಯ ಬೀದಿಗಳಲ್ಲಿ ಪ್ರತಿಭಟನೆ ಕಾವು ಪಡೆದುಕೊಂಡಿದೆ. ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಒತ್ತಾಯಿಸಿ ಜಂತರ್ ಮಂತರ್‌ನಲ್ಲಿ ವಿದ್ಯಾರ್ಥಿಗಳು ಬೃಹತ್ ಧರಣಿ ನಡೆಸುತ್ತಿದ್ದಾರೆ.

ಈ ವಾರದ ಆರಂಭದಲ್ಲಿ ಸಂಸತ್ತಿಗೆ ಹಮಿಕೊಳ್ಳಲಾಗಿದ್ದ ಚಲೋ ಸಂಸದ್ ಮೆರವಣಿಗೆಯ ವೇಳೆ ದೆಹಲಿಯ ಬೀದಿಗಳಲ್ಲಿ ಹಿಂಸಾಚಾರ ನಡೆಯಿತು. ಪ್ರತಿಭಟನಾಕಾರರನ್ನು ಚದುರಿಸಲು ಪೊಲೀಸರು ಅಶ್ರುವಾಯು ಮತ್ತು ಲಾಠಿಚಾರ್ಜ್ ನಡೆಸಿದ್ದರಿಂದ ಹಲವು ವಿದ್ಯಾರ್ಥಿಗಳು ಹಾಗೂ ಪೊಲೀಸರು ಗಾಯಗೊಂಡಿದ್ದರು.ಪೊಲೀಸರ ಕ್ರಮವನ್ನು ವಿದ್ಯಾರ್ಥಿ ಸಂಘಟನೆ ಗಳು ಕ್ರೂರ ನಡೆ ಎಂದು ಖಂಡಿಸಿ ದ್ದರೆ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಅಗತ್ಯವಿದ್ದಷ್ಟು ಮಾತ್ರ ಸಂಯಮದಿಂದ ವರ್ತಿಸಿದ್ದೇವೆ ಎಂದು ದೆಹಲಿ ಪೊಲೀಸರು ಸಮರ್ಥಿಸಿಕೊಂಡಿದ್ದಾರೆ.

ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಆಟವಾಡುತ್ತಿರುವ ನೀಟ್ ಪರೀಕ್ಷಾ ಅಕ್ರಮಗಳ ವಿರುದ್ಧ ದೇಶಾದ್ಯಂತ ಜನಾಕ್ರೋಶ ವ್ಯಕ್ತವಾಗುತ್ತಿದೆ.

ಯೋಗ ಕೇಂದ್ರಕ್ಕೆ ಸ್ಥಳಾವಕಾಶ ನೀಡಿ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಯೋಗ ಕೇಂದ್ರ ದಲ್ಲಿ ನಿಖರವಾಗಿ ಮತ್ತು ಪಟುಗಳ ಅನುಕೂಲಕ್ಕಾಗಿ ಕಾರ್ಯ ಚಟು ವಟಿಕೆಗಳು ನಿರಂತರವಾಗಿ ನಡೆಯಲು ಸ್ಥಳ ಅವಕಾಶ ನೀಡು ವಂತೆ ಕೋರಿ ಶಾಸಕ ಸಿ.ಎನ್. ಬಾಲಕೃಷ್ಣ ಅವರನ್ನು ಪಟ್ಟಣದ ಆರಾಧ್ಯ ಯೋಗ ಕೇಂದ್ರ ಗೆಳೆಯರ ಬಳಗದ ವತಿಯಿಂದ ಮನವಿ ಮಾಡಲಾಯಿತು.

ರಾಜ್ಯದ ಹಲವಾರು ಕಡೆ ಯೋಗ ಕೇಂದ್ರಗಳಿದ್ದು ಸಮಾಜದ ಸುಸ್ಥಿತಿಗೆ ಯೋಗಿಗಳ ಸದೃಢ ದೇಹ ಹಾಗೂ ಮಾನಸಿಕ ಸದೃಢತೆಗೆ ಹಾಗೂ ಸಮಾಜದ ಇತರೆ ಚಟುವಟಿಕೆಗಳ ಕಾರ್ಯಕ್ರಮಗಳಿಗೆ ಅನುವು ಮಾಡಿ ಕೊಡಬೇಕೆಂದು ಸಂಘವು ಒತ್ತಾಯಿಸಿ ಮನವಿ ಪತ್ರವನ್ನು ಸಲ್ಲಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ಪಟ್ಟಣದಲ್ಲಿ ಉತ್ತಮ ಸ್ಥಳವನ್ನು ಗುರುತಿಸಿ ಶೀಘ್ರದಲ್ಲೇ ಯೋಗ ಕೇಂದ್ರಕ್ಕೆ ಅನುಕೂಲ ಮಾಡಿಕೊಡ ಲಾಗುವುದು ಎಂದು ಭರವಸೆ ನೀಡಿದರು.

ವಿದ್ಯುತ್ ವ್ಯತ್ಯಯ

ಹಾಸನ: ಹೊಳೆನರಸೀಪುರ ಉಪ ವಿಭಾಗದ ಹಳ್ಳಿಮೈಸೂರು ಶಾಖಾ ವ್ಯಾಪ್ತಿಯ ಕಲ್ಲಪಳ್ಳಿ ಗ್ರಾಮದಿಂದ ಹಳ್ಳಿಮೈಸೂರು ಉಪ ಸ್ಥಾವರದ ವರೆಗೆ ಹೆಚ್.ಟಿ. ಹಾಗೂ ಎಲ್.ಟಿ ಮಾರ್ಗಗಳಿಗೆ ಅಡಿ ಅಟಿಜಛಿಣಡಿ ಅಳವಡಿಸುವ ಕಾಮಗಾರಿಯನ್ನು ಮೆ. ಸೋಲಾರ್ 91 ರವರು ನಿರ್ವಹಿಸುತ್ತಿರುವುದರಿಂದ ಜು. 25 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯ ವರೆಗೆ ಲೈನ್ ಕ್ಲಿಯರ್ (ಮಾರ್ಗ ಮೂಕ್ತತೆ) ತೆಗೆದುಕೊಳ್ಳಬೇಕಾಗಿರು ವುದರಿಂದ ಈ 5- ದೇವರಗುಡ್ಡೇನ ಹಳ್ಳಿ ಮತ್ತು ಈ 6 - ಕಲ್ಲಪಳ್ಳಿ ಫೀಡರ್ ಗಳ ವ್ಯಾಪ್ತಿಗೆ ಬರುವ ಗ್ರಾಮಗಳಾದ ಕಲ್ಲಪಳ್ಳಿ, ಜೋಗಿ ಕೊಪ್ಪಲು, ದೇವರ ಗುಡ್ಡೇನಹಳ್ಳಿ, ಗೋಪಳ್ಳಿ ಹಾಗೂ ಸುತ್ತಮುತ್ತಲ್ಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದ ರಿಂದ ಸಾರ್ವಜನಿಕರು ಸಹಕರಿಸು ವಂತೆ ಚಾಮುಂಡೇಶ್ವರಿ ವಿದ್ಯುತ್‌ಚ್ಛಕ್ತಿ ಸರಬರಾಜು ನಿಗಮ ನಿಯಮಿತ ಹೊಳೆ ನರಸೀಪುರ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಕೋರಿದ್ದಾರೆ.

ವಿದ್ಯುತ್ ಸಮಸ್ಯೆಗೆ ತ್ವರಿತಗತಿ ಪರಿಹಾರದ ಭರವಸೆ

• ಪ್ರಜೋದಯ ವರದಿ

ಹಾಸನ: ಕಾಫಿ ಬೆಳೆಗಾರರು, ಕೈಗಾರಿಕೋದ್ಯಮಿಗಳು ಎದುರಿಸುತ್ತಿರುವ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿದ್ದು, ಈ ವ್ಯಾಪ್ತಿಯಲ್ಲಿ ಬಗೆಹರಿಸಬಹುದಾದ ಸಮಸ್ಯೆಗಳಿಗೆ ತ್ವರಿತಗತಿಯಲ್ಲಿ ಪರಿಹಾರ ಕಲ್ಪಿಸಲಾಗುವುದೆಂದು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಅಧ್ಯಕ್ಷೆ ಪಿ.ರವಿ ಕುಮಾರ್ ಅವರು ಹೇಳಿದರು.

ನಗರದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಭವನದಲ್ಲಿ ಶುಕ್ರವಾರ ನಡೆದ ಕೈಗಾರಿಕೆ, ಕಾಫಿ ಬೆಳೆಗಾರರು ಹಾಗು ವಿವಿಧ ಸಂಘಟನೆ ಪ್ರತಿನಿಧಿಗಳ ಸಭೆಯಲ್ಲಿ ಮಾತ ನಾಡಿದ ಅವರು, ನಮ್ಮ ವ್ಯಾಪ್ತಿ ಮೀರಿದ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲಾಗುವುದು. ಹಾಸನ ಸೇರಿ ಹಲವು ಜಿಲ್ಲೆಗಳಲ್ಲಿ ಕೈಗಾರಿಕೆಗಳ ಸಮಸ್ಯೆ ಇದೆ. ಕೈಗಾರಿಕೆಗಳಿಗೆ ವಿದ್ಯುತ್ ಕಡಿತವಾದರೆ ಅವರಿಗೆ ಮಾತ್ರವಲ್ಲ, ಇಲಾಖೆಯ ಆದಾಯಕ್ಕೂ ಹೊಡೆತ

ಬೀಳುತ್ತದೆ. ಸಮಸ್ಯೆಗಳ ಆದ್ಯತೆ ಮೇರೆಗೆ ಪರಿಹರಿಸುವ ನಿಟ್ಟಿನಲ್ಲಿ ಕ್ರಮ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಮಾತನಾಡಿದ ಕಾಫಿ ಬೆಳೆಗಾರರ ಒಕ್ಕೂಟದ ಪ್ರತಿನಿಧಿಗಳು, ಕೈಗಾರಿಕೆಗಳ ಮುಖ್ಯಸ್ಥರು ಹಾಗು ರೈತ ಸಂಘಟನೆ ಪ್ರಮುಖರು, ಡಿಬಿಟಿ ಯೋಜನೆ ಅನುಷ್ಠಾನ, ಸೇವಾ ಸಿಂಧು ತಾಂತ್ರಿಕ ದೋಷ, ಮಿಶ್ರ ಬೆಳೆಗಾರರ ನೋಂದಣಿ ಸಮಸ್ಯೆ, ಬಳಕೆಗೆ ಅನುಗುಣವಾಗಿ ವಿದ್ಯುತ್ ಶುಲ್ಕ ವಿಧಿಸುವುದು, 10 ಹೆಚ್‌ಪಿ ಒಳಗಿನ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್, ಬಡ್ಡಿ ಹಾಗು ಬಾಕಿ ಮನ್ನಾ, ಮೀಟರ್ ಅಳವಡಿಕೆ ವಿಳಂಬ, ಮಲೆನಾಡು ಭಾಗದಲ್ಲಿ ವಿದ್ಯುತ್ ವ್ಯತ್ಯಯ, ಕಾಡು ಪ್ರಾಣಿಗಳ ಹಾವಳಿ ಸೇರಿ ಹಲವು ಸಮಸ್ಯೆಗಳನ್ನು ಪ್ರಸ್ತಾಪಿಸಿ, ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವಂತೆ ಒತ್ತಾಯಿಸಿದರು.

ಕೆಇಆರ್‌ಸಿ ಸದಸ್ಯ ಹೆಚ್.ಕೆ. ಜಗದೀಶ್, ಆಯೋಗದ ಸದಸ್ಯ ಜಾವೇದ್ ಅಕ್ತರ್, ತಾಂತ್ರಿಕ ನಿರ್ದೇಶಕ ಶ್ರೀನಿವಾಸಪ್ಪ, ಸೆಸ್ಕಾಂ ತಾಂತ್ರಿಕ ನಿರ್ದೇಶಕ ಎಲ್.ಲೋಕೇಶ್, ಸೆಸ್ಕಾಂ ಅಧೀಕ್ಷಕ ಇಂಜಿನೀಯರ್ ಎ.ಎ. ಸುನೀಲ್ ಕುಮಾರ್ ಮತ್ತಿತರರಿದ್ದರು.

ಆಷಾಢ ಶುಕ್ರವಾರ: ಚೌಡೇಶ್ವರಿಗೆ ವಿಶೇಷ ಪೂಜೆ

• ಪ್ರಜೋದಯ ವರದಿ

ಬೇಲೂರು: ಆಷಾಢ ಮಾಸದ ಎರಡನೇ ಶುಕ್ರವಾರದ ಅಂಗವಾಗಿ ಪಟ್ಟಣದ ದೇವಾಂಗ ಬೀದಿಯ ಶ್ರೀ ಚೌಡೇ ಶ್ವರಿ ಅಮ್ಮನವರ ದೇವ ಸ್ಥಾನದಲ್ಲಿ ದೇವಾಂಗ ಸಮುದಾಯದ ವತಿಯಿಂದ ತಾಯಿಗೆ ವಿಶೇಷ ಅರಿಶಿನ- ಕುಂಕುಮ ಅಲಂಕಾರ ಮಾಡಿ ವೈಭವ ಯುತವಾಗಿ ಪೂಜಾ ಕೈಂಕರ್ಯ ನೆರವೇರಿಸಲಾಯಿತು.

ಶಕ್ತಿ ಸ್ವರೂಪಿಣಿಯಾದ ಶ್ರೀ ಚೌಡೇಶ್ವರಿ ಅಮ್ಮನವರು ದೇವಂಗ ಸಮುದಾಯದ ಆರಾಧ್ಯ ದೈವವಾಗಿದ್ದು, ಭಕ್ತರು ತಮ್ಮ ಇಷ್ಟಾರ್ಥಗಳ ಈಡೇರಿಕೆ, ಕುಟುಂಬದ ಸುಖ-ಶಾಂತಿ, ಆರೋಗ್ಯ ಹಾಗೂ ಸಮೃದ್ಧಿ ಗಾಗಿ ತಾಯಿಯನ್ನು ಭಕ್ತಿಭಾವದಿಂದ ಆರಾಧಿಸುತ್ತಾರೆ. ವಿಶೇಷವಾಗಿ ಆಷಾಢ ಮಾಸದ ಶುಕ್ರವಾರಗಳಲ್ಲಿ ತಾಯಿಗೆ ಅರಿಶಿನ- ಕುಂಕುಮ ಸಮರ್ಪಿಸಿ ಪೂಜೆ ಸಲ್ಲಿಸುವುದರಿಂದ ಸೌಭಾಗ್ಯ, ಐಶ್ವರ್ಯ ಮತ್ತು ನೆಮ್ಮದಿ ದೊರೆಯುತ್ತದೆ ಎಂಬುದು ಭಕ್ತರ ನಂಬಿಕೆಯಾಗಿದೆ.

ಈ ಹಿನ್ನೆಲೆಯಲ್ಲಿ ದೇವಸ್ಥಾನದಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಅಭಿಷೇಕ, ಅಲಂಕಾರ, ಅರ್ಚನೆ, ಅರಿಶಿನ-ಕುಂಕುಮ ಪೂಜೆ ಹಾಗೂ ಮಹಾ ಮಂಗಳಾರತಿ ನೆರವೇರಿಸಲಾಯಿತು. ಪುಷ್ಪಗಳಿಂದ ಕಂಗೊಳಿಸುತ್ತಿದ್ದ ತಾಯಿಯ ದಿವ್ಯ ರೂಪವನ್ನು ಕಂಡು ಭಕ್ತರು ಭಕ್ತಿಭಾವದಿಂದ ನಮಿಸಿ ಆಶೀರ್ವಾದ ಪಡೆದರು. ಬಳಿಕ ಭಕ್ತರಿಗೆ ತೀರ್ಥ-ಪ್ರಸಾದ ವಿತರಿಸಲಾಯಿತು.

ಜು.27ಕ್ಕೆ ಲಯನ್ಸ್ ಕ್ಲಬ್ ಪದಾಧಿಕಾರಿಗಳ ಪದಗ್ರಹಣ

• ಪ್ರಜೋದಯ ವರದಿ

ಅರಸೀಕೆರೆ: ಲಯನ್ಸ್ ಕ್ಲಬ್ ಅರಸೀಕೆರೆ ಕಲ್ಪತರು ಸಂಸ್ಥೆಯ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಜುಲೈ 27ರಂದು ಸೋಮವಾರ ನಗರದ ಹೊರ ವಲಯದಲ್ಲಿರುವ ಹಳ್ಳಿ ಮನೆ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಕ್ಲಬ್ ಅಧ್ಯಕ್ಷ ಎಚ್.ಬಿ. ಸತೀಶ್ ಅವರು ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಅರ್ಥಪೂರ್ಣ ಹಾಗೂ ವಿಜೃಂಭಣೆಯಿಂದ ನಡೆಸಲು ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಲಯನ್ಸ್ ಕ್ಲಬ್‌ನ ಎಲ್ಲಾ ಸದಸ್ಯರು ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಲಯನ್ಸ್ ಕ್ಲಬ್ ವತಿಯಿಂದ ಸಮಾಜಮುಖಿ ಹಾಗೂ ಜನೋಪ ಯೋಗಿ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಮುಂಬ ರುವ

ಪೂರ್ವಾನುಮತಿ ಇಲ್ಲದೆ ವಿಡಿಯೋ ಬಹಿರಂಗಕ್ಕೆ ನಿಷೇಧ

ಸುಪ್ರೀಂ ಕೋರ್ಟ್ ಸ್ಪಷ್ಟ ನಿರ್ದೇಶನ | ಸಾಮಾಜಿಕ ಜಾಲತಾಣ ನಿಯಂತ್ರಣ ಸವಾಲು

• ಪ್ರಜೋದಯ ವರದಿ

ನವದೆಹಲಿ: ಡಿಜಿಟಲ್ ಮಾಹಿತಿಯ ನಿಯಂತ್ರಣ ಇಂದಿನ ದೊಡ್ಡ ಸವಾಲಾಗಿದೆ ಎಂದು ಅಭಿಪ್ರಾಯಪಟ್ಟಿರುವ ಸುಪ್ರೀಂ ಕೋರ್ಟ್ ಕಲಾಪಗಳ ಆಡಿಯೋ-ವಿಡಿಯೋ ದಾಖಲಾತಿಗಳನ್ನು ಪೂರ್ವಾನುಮತಿ ಇಲ್ಲದೆ ಸಾಮಾಜಿಕ ಜಾಲತಾಣಗಳು ಹಾಗು ಇತರ ಡಿಜಿಟಲ್ ವೇದಿಕೆಗಳಲ್ಲಿ ಪೋಸ್ಟ್ ಮಾಡುವುದು, ಮರು ಹಂಚಿಕೆ ಅಥವಾ ವಾಣಿಜ್ಯ ಉದ್ದೇಶಕ್ಕೆ ಬಳಸ ಕೂಡದು ಎಂದು ಮಧ್ಯಂತರ ಆದೇಶ ನೀಡಿದೆ.

ನ್ಯಾಯಾಲಯವು ದಿನದ 24 ಗಂಟೆಯ ಮನರಂಜನಾ ವಾಹಿನಿಯಾಗಲು ಸಾಧ್ಯವಿಲ್ಲ ಎಂದಿದೆ. ನ್ಯಾಯಾಲಯದ ನ್ಯಾಯಾಂಗ ಕಲಾಪಗಳ ಆಡಿಯೋ-ವಿಡಿಯೋ ದಾಖಲಾತಿಗಳ ದುರುಪಯೋಗ ತಡೆಯುವಂತೆ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠವು ಈ ಆದೇಶ ನೀಡಿದೆ. ಸುಪ್ರೀಂಕೋರ್ಟ್‌ನ ಕಾರ್ಯದರ್ಶಿ ಜನರಲ್ ಅಥವಾ ಸಂಬಂಧಿತ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಅವರ ಪೂರ್ವಾನುಮತಿ ಪಡೆಯದೆ ನ್ಯಾಯಾಲಯದ ಕಲಾಪಗಳ ಆಡಿಯೋ-ವಿಡಿಯೋವನ್ನು ಸಂಪಾದಿಸುವುದು, ಪ್ರಸಾರ ಮಾಡುವುದು, ಹಣಗಳಿಕೆಗಾಗಿ ಬಳಸುವುದು, ಪೋಸ್ಟ್ ಮಾಡು ವುದು, ಮರುಪೋಸ್ಟ್ ಮಾಡುವುದು ಹಾಗು ಅಪ್‌ಲೋಡ್ ಮಾಡುವುದು ಸಲ್ಲ ಎಂದು ಎಂದು ಪೀಠ ನಿರ್ದೇಶಿಸಿದೆ. ಆದರೆ, ನ್ಯಾಯಾಲಯದ ಕಲಾಪಗಳ ಕುರಿತು ಮಾಧ್ಯಮಗಳು ಪ್ರಕಟಿಸುವ ಸುದ್ದಿಗಳಿಗೆ ಈ ಆದೇಶ ಅನ್ವಯಿಸುವುದಿಲ್ಲವೆಂದು ಸ್ಪಷ್ಟಪಡಿಸಿದೆ.

ಈ ಸಂಬಂಧ ಪತ್ರಕರ್ತೆ ಹರ್ಷಿತಾ ಗ್ರೋವರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಕೋರ್ಟ್, ಸರ್ಕಾರ ಹಾಗು ಕೆಲವು ಸಾಮಾಜಿಕ ಜಾಲತಾಣಗಳು ಸೇರಿ ಪ್ರತಿವಾದಿಗಳಿಗೆ ನೋಟೀಸ್ ಜಾರಿಗೊಳಿಸಿತು. ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ವಿಕಾಸ್ ಸಿಂಗ್ ಅವರು, ನ್ಯಾಯಾಲಯದ ಕಲಾಪಗಳ ಆಯ್ದ ಭಾಗಗಳನ್ನು ಮಾತ್ರ ಕತ್ತರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರ ಮಾಡಲಾಗುತ್ತಿದ್ದು, ಅವುಗಳನ್ನು ತಪ್ಪು ದಾರಿಗೆಳೆಯುವ ರೀತಿ ಯಲ್ಲಿ ಬಳಸಲಾಗುತ್ತಿದೆ ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಪೀಠ, ನ್ಯಾಯಾಂಗದ ಘನತೆ ಮತ್ತು ವಿಶ್ವಾಸವನ್ನು ಕಾಪಾಡುವುದು ಅಗತ್ಯವಾಗಿದ್ದು, ಡಿಜಿಟಲ್ ಮಾಹಿತಿಯ ನಿಯಂತ್ರಣ ಈಗಿನ ದೊಡ್ಡ ಸವಾಲಾಗಿದೆ ಎಂದು ಅಭಿಪ್ರಾಯಪಟ್ಟಿತು. ವಿಚಾರಣೆ ವೇಳೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ನ್ಯಾಯಾ ಲಯದ ವಿಡಿಯೋಗಳನ್ನು ಆಯ್ದ ಭಾಗಗಳಾಗಿ ಹರಡಿ ನಿರ್ದಿಷ್ಟ ಕಥನ ಸೃಷ್ಟಿಸಲಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ಕೃತಕ ಬುದ್ಧಿಮತ್ತೆ ಸೇರಿ ತಂತ್ರಜ್ಞಾನ ಬಳಸಿ ನ್ಯಾಯ ಮೂರ್ತಿಗಳು ಅಥವಾ ವಕೀಲರು ಹೇಳದ ಮಾತುಗಳನ್ನೂ ವಿಡಿಯೊಗಳಲ್ಲಿ ಸೇರಿಸುವ ಅಪಾಯವಿದೆ ಎಂದರು.

ತಮ್ಮ ಹೇಳಿಕೆಗಳನ್ನೂ ಇತ್ತೀಚೆಗೆ ತಪ್ಪಾಗಿ ವರದಿ ಮಾಡಲಾಗಿದೆ ಎಂದು ಹೇಳಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ಮಾಧ್ಯಮಗಳಲ್ಲಿ ವಾಸ್ತವಕ್ಕೆ ವಿರುದ್ಧವಾದ ವರದಿಗಳು ಪ್ರಕಟವಾಗುತ್ತಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ನ್ಯಾಯಾಲಯದ ಕಲಾಪಗಳ ನೇರಪ್ರಸಾರ ವನ್ನು ಪಾರದರ್ಶಕತೆ ಮತ್ತು ಸಾರ್ವಜನಿರಿಗೆ ಲಭ್ಯವಾಗಲು ಆರಂಭಿಸಲಾಗಿದ್ದರೂ, ಅವುಗಳ ಮರುಪ್ರಸಾರ ಮತ್ತು ವಾಣಿಜ್ಯ ಬಳಕೆಗೆ ಸ್ಪಷ್ಟ ನಿಯಮಗಳಿಲ್ಲದಿರುವುದು ದುರುಪಯೋಗಕ್ಕೆ ಕಾರಣವಾಗಿದೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ. ಆಯ್ದ ವಿಡಿಯೋ ತುಣುಕುಗಳನ್ನು ಸಂಚಲನಕಾರಿ ಶೀರ್ಷಿಕೆಗಳೊಂದಿಗೆ ಪ್ರಸಾರ ಮಾಡುವುದರಿಂದ ನ್ಯಾಯಾಂಗದ ಮೇಲಿನ ಸಾರ್ವಜನಿಕ ನಂಬಿಕೆಗೆ ಧಕ್ಕೆಯಾಗುತ್ತಿದೆ ಎಂದೂ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಈ ಆದೇಶವು ನ್ಯಾಯಾಲಯದ ಕಲಾಪಗಳ ಸುದ್ದಿ ವರದಿ ಮಾಡುವಿಕೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಅದನ್ನು ತಮಾಷೆ ಆದೇಶವೆಂದು ಪರಿಗಣಿಸಬಾರದು. ನ್ಯಾಯಾಲಯದ ಕೊಠಡಿಗಳಲ್ಲಿ ಆಯ್ದ ಮತ್ತು ಸಂದರ್ಭೋಚಿತವಲ್ಲದ ಮಾಹಿತಿ ವಿನಿಮಯ ಪ್ರಕ್ರಿಯೆಗಳು ನ್ಯಾಯಾಲಯಗಳ ಘನತೆಯನ್ನು ಹಾಳು ಮಾಡುತ್ತಿವೆ. ನ್ಯಾಯ ವಿತರಣಾ ವ್ಯವಸ್ಥೆಯಲ್ಲಿ ಸಾರ್ವಜನಿಕ ವಿಶ್ವಾಸವನ್ನು ಕುಗ್ಗಿಸುತ್ತಿವೆ ಎಂದು ಪತ್ರಕರ್ತೆ ಹರ್ಷಿತಾ ಗ್ರೋವರ್ ಅರ್ಜಿ ಸಲ್ಲಿಸಿದ್ದರು.

ಚನ್ನಮ್ಮ ತ್ಯಾಗಮಯಿ, ನನ್ನ ಬಾಳಿನ ಚೈತನ್ಯ ಶಕ್ತಿ

» ಮೊದಲನೇ ಪುಟದಿಂದ

ರಾಜಕೀಯ ಹಿನ್ನಲೆಯೇ ಇಲ್ಲದ ನಮ್ಮ ಕುಟುಂಬದ ಸೊಸೆಯಾಗಿ ಬಂದ ಅವರು, ದೈವ ಭಕ್ತಿ, ಸಾತ್ವಿಕತೆ ಮತ್ತು ಸಾಂಪ್ರದಾಯಿಕ ನಡವಳಿಕೆಯ ಮೂಲಕ ನಮ್ಮ ಮನೆಯನ್ನು ನಂದ ಗೋಕುಲ ಮಾಡಿದರು. ನಿತ್ಯ ದಾಸೋಹಿಯಾಗಿ ಮನೆಯ ಅನ್ನ ಪೂರ್ಣೆಯಾದರು. ಮಾನವೀಯ ಮೌಲ್ಯಗಳ ಅನುಸರಣೆ ಹಾಗು ಶುದ್ಧ ಅಂತಃಕರಣದ ಮಾತೃ ಪ್ರೇಮದ ಮೂಲಕ ಎಲ್ಲರ ಪಾಲಿನ ಅಮ್ಮನಾದರು. ಅವರು ಕೊನೇ ಉಸಿರು ಬಿಟ್ಟಾಗಿನಿಂದ ಮಾಪಿನಕೆರೆ ರಂಗನಾಥ ಸ್ವಾಮಿ ಪಾದದ ಬುಡದಲ್ಲಿ ಚಿರನಿದ್ರೆಗೆ ಜಾರುವ ಕ್ಷಣದವರೆಗೂ ಅವರ ಆತ್ಮಕ್ಕೆ ಮರುಗಿದ ಎಲ್ಲರಿಗೂ ಭಾವ ಪೂರ್ವಕವಾಗಿ ಧನ್ಯವಾದ ಅರ್ಪಿಸುವುದಾಗಿ ತಿಳಿಸಿದ್ದಾರೆ.

ರಾಜ್ಯದ ಮುಖ್ಯಮಂತ್ರಿ, ಗೌರವಾನ್ವಿತ ಕೇಂದ್ರ ಸಚಿವರು, ಮಾಜಿ ಮುಖ್ಯಮಂತ್ರಿಗಳು, ವಿವಿಧ ಮಠಗಳ ಪೀಠಾಧೀಶರು, ಮಂತ್ರಿಗಳು, ಮಾಜಿ ಮಂತ್ರಿಗಳು, ಶಾಸಕರು, ಮಾಜಿ ಶಾಸಕರು, ಮಾಧ್ಯಮ ಬಂಧುಗಳು, ಪೊಲೀಸ್ ಇಲಾಖೆ, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗು ಕಲೆ, ಸಾಹಿತ್ಯ, ಸಿನಿಮಾ ಸೇರಿ ವಿವಿಧ ಕ್ಷೇತ್ರಗಳ ಗಣ್ಯರು ಮತ್ತು ರಾಜ್ಯದ ಸರ್ವ ಭಾಗಗಳಿಂದ ಹರಿದು ಬಂದ ಜನಸಾಗರ ನನ್ನ ಅರ್ಧಾಂಗಿಯ ಆತ್ಮಕ್ಕೆ ಚಿರಶಾಂತಿ ಕೋರಿತು. ಇದಕ್ಕೆ ಪ್ರತಿಯಾಗಿ ಕೃತಜ್ಞತೆ ಸಲ್ಲಿಸುವ ಎನ್ನುವುದು ಬಹಳ ಚಿಕ್ಕ ಮಾತಾಗುತ್ತದೆ. ಅದಕ್ಕೂ ಮೀರಿ ನಾನು ವಿನೀತನಾಗಿ ಎಲ್ಲರಿಗೂ ನಮಿಸುತ್ತೇನೆ. ವಿಶೇಷವಾಗಿ ನಾನು ಜನ್ಮವೆತ್ತಿದ ಹಾಸನ ಜಿಲ್ಲೆಯ ಮಹಾಜನರು ತಮ್ಮಗಳ ಅಕ್ಕರೆಯ ಅಮ್ಮ ಚನ್ನಮ್ಮ ಅವರ ಬಗ್ಗೆ ತೋರಿದ ಅಭಿಮಾನ, ವಾತ್ಸಲ್ಯಕ್ಕೆ ನಾನು ಮೂಕನಾಗಿದ್ದೇನೆ ಎಂದರು.

ಫುಟ್‌ಪಾತ್ ತೆರವಾಯ್ತು... ಟ್ರಾಫಿಕ್‌ಗೆ ಪರಿಹಾರ ಯಾವಾಗ ?

» ಮೊದಲನೇ ಪುಟದಿಂದ

ಬದಿಯಲ್ಲೇ ಕಾರು ಹಾಗು ದ್ವಿಚಕ್ರ ವಾಹನ ಗಳನ್ನು ನಿಲ್ಲಿಸುತ್ತಿರುವುದರಿಂದ ರಸ್ತೆಯ ಅಗಲ ಮತ್ತಷ್ಟು ಕುಂಠಿತವಾಗುತ್ತಿದೆ.

ಪಾರ್ಕಿಂಗ್ ಕೊರತೆ

ನಗರದಲ್ಲಿ ಯೋಜಿತ ಪಾರ್ಕಿಂಗ್ ವ್ಯವಸ್ಥೆ, ಏಕಮುಖ ಸಂಚಾರ, ವಾಹನ ನಿಲುಗಡೆ ವಲಯಗಳ ಗುರುತು, ಕಟ್ಟುನಿಟ್ಟಿನ ದಂಡ ಕ್ರಮ ಮತ್ತು ನಿರಂತರ ಪೊಲೀಸ್ ಮೇಲ್ವಿಚಾರಣೆ ಇಲ್ಲದಿದ್ದರೆ ಟ್ರಾಫಿಕ್ ಸಮಸ್ಯೆ ಬಗೆಹರಿಯುವುದಿಲ್ಲ. ಬಿ.ಎಂ.ರಸ್ತೆ, ಸಾಲಗಾಮೆ ರಸ್ತೆ, ಬಸ್ ನಿಲ್ದಾಣ ಸುತ್ತಮುತ್ತ ಹಾಗು ಪ್ರಮುಖ ವಾಣಿಜ್ಯ ಪ್ರದೇಶಗಳಲ್ಲಿ ಸಮರ್ಪಕ ಪಾರ್ಕಿಂಗ್ ವ್ಯವಸ್ಥೆಯ ಕೊರತೆಯೇ ಸಂಚಾರ ದಟ್ಟಣೆಗೆ ಪ್ರಮುಖ ಕಾರಣವಾಗಿದೆ.

ಪಾದಚಾರಿಗಳಿಗೆ ಸಂಕಷ್ಟ

ಅತಿಕ್ರಮಣ ತೆರವಾದ ಬಳಿಕ ಫುಟ್‌ಪಾತ್‌ನಲ್ಲಿ ನಿರಾಳವಾಗಿ ನಡೆಯಬಹುದೆಂಬ ನಿರೀಕ್ಷೆ ಸಾರ್ವಜನಿಕರಲ್ಲಿತ್ತು. ಆದರೆ, ಹಲವೆಡೆ ಫುಟ್‌ಪಾತ್‌ಗಳ ಅಂಚಿನಲ್ಲೇ ದ್ವಿಚಕ್ರ ವಾಹನಗಳನ್ನು ನಿಲ್ಲಿಸಲಾಗುತ್ತಿದ್ದು, ಪಾದಚಾರಿಗಳು ಮತ್ತೆ ರಸ್ತೆಯಲ್ಲೇ ನಡೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ವಯೋವೃದ್ಧರು, ಶಾಲಾ ಮಕ್ಕಳು ಹಾಗು ಮಹಿಳೆಯರಿಗೆ ಈ ಪರಿಸ್ಥಿತಿ ಮತ್ತಷ್ಟು ತೊಂದರೆಯಾಗುತ್ತಿದೆ. ರಸ್ತೆ ದಾಟುವ ಸಂದರ್ಭದಲ್ಲೂ ವಾಹನ ದಟ್ಟಣೆಯಿಂದ ಅಪಾಯ ಎದುರಾಗುತ್ತಿದೆ.

ವ್ಯಾಪಾರಿಗಳ ಬದುಕು ಅತಂತ್ರ

ತೆರವು ಕಾರ್ಯಾಚರಣೆಯಿಂದ ನೂರಾರು ಬೀದಿಬದಿ ವ್ಯಾಪಾರಿಗಳ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಅನೇಕರು ಸಾಲ ಮಾಡಿ ತಳ್ಳುಗಾಡಿ, ಸಣ್ಣ ಅಂಗಡಿಗಳನ್ನು ನಡೆಸುತ್ತಿದ್ದರು. ಈಗ ಆದಾಯದ ಮೂಲವೇ ಕಳೆದುಕೊಂಡಿದ್ದು, ಕುಟುಂಬ ನಿರ್ವಹಣೆಯೂ ಕಷ್ಟವಾಗಿದೆ ಎಂದು ವ್ಯಾಪಾರಿಗಳು ಅಳಲು ತೋಡಿಕೊಂಡಿದ್ದಾರೆ. ನಗರದಲ್ಲಿ ಪರ್ಯಾಯ ವ್ಯಾಪಾರ ವಲಯ ಅಥವಾ ವೆಂಡಿಂಗ್ ಝೋನ್‌ಗಳನ್ನು ಗುರುತಿಸಿ ಅವಕಾಶ ಕಲ್ಪಿಸುವಂತೆ ಜಿಲ್ಲಾಡಳಿತ ಹಾಗು ಮಹಾನಗರ ಪಾಲಿಕೆಗೆ ಮನವಿ ಮಾಡಿದ್ದಾರೆ.

ಇಂದು 6ನೇ ವರ್ಷದ ಹಸಿರ ಸಿರಿ ಸಸ್ಯೋತ್ಸವಕ್ಕೆ ಚಾಲನೆ

• ಪ್ರಜೋದಯ ವರದಿ

ಹಾಸನ: ಪರಿಸರ ಸಂರಕ್ಷಣೆ ಉದ್ದೇಶದಿಂದ ಟೈಮ್ಸ್ ಶಿಕ್ಷಣ ಸಮೂಹ ಸಂಸ್ಥೆ ನಡೆಸಿಕೊಂಡು ಬಂದಿರುವ ಹಸಿರ ಸಿರಿ ಸಸ್ಯೋತ್ಸವದ 6ನೇ ವರ್ಷದ ಕಾರ್ಯಕ್ರಮಕ್ಕೆ ಜು.25ರ ಶನಿವಾರ ಬೆಳಿಗ್ಗೆ 10.30ಕ್ಕೆ ವಿಜಯ ನಗರದ ಟೈಮ್ಸ್ ಶಾಲಾ ಆವರಣದಲ್ಲಿ ಚಾಲನೆ ನೀಡಲಾಗುವುದೆಂದು ಸಂಸ್ಥೆ ಕಾರ್ಯದರ್ಶಿ ಬಿ.ಕೆ. ಗಂಗಾಧರ್ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಈ ವರ್ಷ ಪ್ರಕೃತಿಯಿಂದ ಸ್ಫೂರ್ತಿ, ಹವಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ ಈಗ ಒಂದು ಗಿಡ ನೆಡಿ ಎಂಬ ಧ್ಯೇಯವಾಕ್ಯದೊಂದಿಗೆ ಕಾರ್ಯಕ್ರಮ ರೂಪಿಸಲಾಗಿದೆ. ಹವಾಮಾನಕ್ಕಾಗಿ ಬದಲಾವಣೆ ಮತ್ತು ಪರಿಸರ ವ್ಯವಸ್ಥೆಯ ನಾಶದ ವಿರುದ್ಧ ಜಾಗೃತಿ ಮೂಡಿಸಲು ಟೈಮ್ಸ್ ಶಿಕ್ಷಣ ಸಮೂಹ ಸಂಸ್ಥೆಯು ಕಳೆದ 5 ವರ್ಷಗಳಿಂದ ಈ ಕಾರ್ಯಕ್ರಮ ಮಾಡುತ್ತಿದೆ ಎಂದರು.

ವಿದ್ಯಾರ್ಥಿಗಳಿಗೆ ಪ್ರಕೃತಿ ಹಾಗು ಮಾನವ ಸಂಬಂಧ ಇಡೀ ಜಗತ್ತನ್ನು ಬಂಧುಗಳನ್ನಾಗಿ ಮಾಡುತ್ತದೆ ಎಂಬ ಜಾಗೃತಿ ಮೂಡಿಸಿ ಪ್ರಜ್ಞಾವಂತ ಪೋಷಕರ ಸಹಕಾರದೊಂದಿಗೆ ವಿದ್ಯಾರ್ಥಿ ಗಳು ನೆಡುವ ಒಂದು ಗಿಡ ಪರಿಸರದೊಂದಿಗೆ ಬೆಸೆಯುವ ಕೊಂಡಿ ಇದ್ದಂತೆ ಎಂಬ ಪ್ರಯತ್ನದಲ್ಲಿ 6ನೇ ವರ್ಷದ ಸಂಕಲ್ಪ ಆಚರಣೆಗೆ ಮುಂದಾಗಿದ್ದೇವೆಂದರು.

ನಾವು ವಿತರಿಸುವ ಗಿಡಗಳನ್ನು ವಿದ್ಯಾರ್ಥಿಗಳೇ ನೆಟ್ಟರೂ ಶಿಕ್ಷಕರು ಮೇಲ್ವಿಚಾರಣೆ ಮಾಡುತ್ತಾರೆ. ವರ್ಷವಿಡೀ ನಿರ್ವಹಣೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹದ ಪ್ರಮಾಣ ಪತ್ರ ವಿತರಿಸಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ರೋಟರಿ ರಾಯಲ್ಸ್ ನೂತನ ಅಧ್ಯಕ್ಷ ಹೆಚ್.ಕೆ. ದಿಲೀಪ್ ಕುಮಾರ್, ಕಾರ್ಯದರ್ಶಿ ಹರೀಶ್, ಖಜಾಂಚಿ ಪವನ್, ರೋಟರಿ ವಲಯದ ಸಚಿನ್, ಯೋಗೀಶ್ ಇದ್ದರು.

ಪುಟ್ಟಮ್ಮ ನಿಧನ

• ಪ್ರಜೋದಯ ವರದಿ

ಆಲೂರು: ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ದಿ||ಕೆ.ಸುಬ್ಬಶೆಟ್ಟಿ ರವರ ಪತ್ನಿ ಪುಟ್ಟಮ್ಮ (81) ರವರು ವಯೋಸಹಜ ಕಾಯಿಲೆಯಿಂದ ತಮ್ಮ ಸ್ವಗೃಹದಲ್ಲಿ ನಿಧನರಾದರು. ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಗೋಪಿಕೃಷ್ಣ ಸೇರಿ ನಾಲ್ಕು ಗಂಡು ಮಕ್ಕಳು ಓರ್ವ ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಪಟ್ಟಣದ ಸಮೀಪದ ಸ್ವಂತ ಜಮೀನಿನಲ್ಲಿ ಜು.25 ರಂದು 12 ಗಂಟೆಗೆ ನೆರವೇರಲಿದೆ.

ಮೌನ ಮುರಿದ ಮೋದಿಗೆ ಡಿ.ಕೆ.ಶಿ. ಧನ್ಯವಾದ

• ಪ್ರಜೋದಯ ವರದಿ

ಬೆಂಗಳೂರು: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಸಂಬಂಧಿಸಿ ಕೊನೆಗೂ ಮೌನ ಮುರಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ಸಲ್ಲಿಸುತ್ತೇನೆಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವಿಷಯದ ಬಗ್ಗೆ ಇಷ್ಟು ದಿನ ಮೌನವಾಗಿದ್ದು ಸರಿಯಲ್ಲ. ಕನಿಷ್ಟ ಪಕ್ಷ (ಪ್ರಧಾನಿ) ಈಗಲಾದರೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ. ಸುಮಾರು ಹದಿನೈದು ದಿನಗಳು ಅಥವಾ ಒಂದು ತಿಂಗಳ ನಂತರ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದು ಮುಖ್ಯ. ನಾವೆಲ್ಲರೂ ನಮ್ಮ ಮಕ್ಕಳು ಮತ್ತು ಯುವಕರ ಭವಿಷ್ಯಕ್ಕಾಗಿ ಕೆಲಸ ಮಾಡುತ್ತೇವೆ. ಈಗ ಅವರು ಇಡೀ ದೇಶದ ಮುಂದೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವರಿಗೆ ಧನ್ಯವಾದಗಳು ಎಂದರು.

ನೀಟ್ ಅಕ್ರಮ ಖಂಡಿಸಿ ವಿವಿಧ ಸಂಘಟನೆಗಳಿಂದ ಪ್ರತಿಭಟನೆ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ನೀಟ್ ಅಕ್ರಮ ಖಂಡಿಸಿ ನವದೆಹಲಿಯ ಜಂತರ್-ಮಂತರ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆ ಬೆಂಬಲಿಸಿ ವಿವಿಧ ಸಂಘಟನೆಗಳು ಹಾಗು ವಿದ್ಯಾರ್ಥಿಗಳು ಕೇಂದ್ರ ಸರ್ಕಾರದ ವಿರುದ್ಧ ಶುಕ್ರವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಮಿನಿ ವಿಧಾನಸೌಧದ ಮುಂಭಾಗ ಜಮಾಯಿಸಿದ ಸಿಐಟಿಯು, ಕೆಪಿಆರ್‌ಎಸ್, ವಿದ್ಯಾರ್ಥಿಗಳ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ದಲಿತ ಜನಪರ ಚಳವಳಿಗಳ ಒಕ್ಕೂಟ ಪದಾಧಿಕಾರಿಗಳು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳ ಮೇಲೆ ಅಮಾನವೀಯವಾಗಿ ಲಾಠಿಚಾರ್ಜ್ ಮಾಡಿ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸಲಾಗುತ್ತಿದೆ. ಕೇಂದ್ರ ಸರ್ಕಾರ, ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಜವಾಬ್ದಾರಿ ಮರೆತು ವರ್ತಿಸುತ್ತಿದ್ದಾರೆ. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ನ್ಯಾಯ ಸಿಗಬೇಕು. ಅದಕ್ಕಾಗಿ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಕೊಡಬೇಕು. ಪ್ರಧಾನಿ ಮೋದಿ ದೇಶದ ಜನರ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದರು.

ಸಿಐಟಿಯು ಮುಖಂಡ ಹೆಚ್.ಎಸ್.ಮಂಜುನಾಥ್ ಅವರು ಮಾತನಾಡಿ, ಕೇಂದ್ರ ಸರ್ಕಾರ ವ್ಯವಸ್ಥಿತವಾಗಿ ನೀಟ್ ಪರೀಕ್ಷೆ ನಡೆಸುವಲ್ಲಿ ವಿಫಲವಾಗಿದೆ. ಅದರಿಂದ ಹಲವು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ನ್ಯಾಯ ಸಿಗಬೇಕು. ಅದಕ್ಕಾಗಿ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಕೊಡಬೇಕು. ಪ್ರಧಾನಿ ಮೋದಿ ದೇಶದ ಜನರ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದರು.

ಕೊಂಡ ವಿದ್ಯಾರ್ಥಿಗಳಿಗೆ ನ್ಯಾಯ ಸಿಗಬೇಕು. ಅದಕ್ಕಾಗಿ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಕೊಡಬೇಕು. ಪ್ರಧಾನಿ ಮೋದಿ ದೇಶದ ಜನರ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದರು.

ಸಿಐಟಿಯು ಮುಖಂಡ ಹೆಚ್.ಎಸ್.ಮಂಜುನಾಥ್ ಅವರು ಮಾತನಾಡಿ, ಕೇಂದ್ರ ಸರ್ಕಾರ ವ್ಯವಸ್ಥಿತವಾಗಿ ನೀಟ್ ಪರೀಕ್ಷೆ ನಡೆಸುವಲ್ಲಿ ವಿಫಲವಾಗಿದೆ. ಅದರಿಂದ ಹಲವು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ನ್ಯಾಯ ಸಿಗಬೇಕು. ಅದಕ್ಕಾಗಿ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಕೊಡಬೇಕು. ಪ್ರಧಾನಿ ಮೋದಿ ದೇಶದ ಜನರ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದರು.

ಕೊಂಡ ವಿದ್ಯಾರ್